ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 817
ಸದಸ್ಯರ ಹೆಸರು : ಶ್ರೀ ಗೋವಿಂದರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 20-12-2021
ಉತ್ತರಿಸುವ ಸಚಿವರು : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕನ್ನಡ ಸಾಹಿತ್ಯ ಪರಿಷತ್ತಿಗೆ ಕಳೆದ ಮೂರು ವರ್ಷದಿಂದ ಸರ್ಕಾರದ ವತಿಯಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ.	ಕನ್ನಡ ಸಾಹಿತ್ಯ ಪರಿಷತ್ತಿಗೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ. 1. 2018-19 ರೂ. 7,00,00,000-00 2. 2019- 20 ರೂ. 5,00,00,000-00 3. 2020-21 ರೂ. 5,00,00,000-00 **ಒಟ್ಟು ಮೊತ್ತ ರೂ. 17,00,00,000-00**
ಆ	ಬಿಡುಗಡೆಯಾಗಿರುವ ಅನುದಾನವನ್ನು ಯಾವ ಯಾವ ಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ.	ಕನ್ನಡ ಸಾಹಿತ್ಯ ಪರಿಷತ್ತು ಸರ್ಕಾರದಿಂದ ನೀಡಿರುವ ಅನುದಾನವನ್ನು ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಇವುಗಳ ರಕ್ಷಣೆ, ಪ್ರಸಾರ ಮತ್ತು ಅಭಿವೃದ್ಧಿಗಾಗಿ, ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನ, ಜಿಲ್ಲಾ, ತಾಲ್ಲೂಕು ನಿರ್ವಹಣೆ, ರಾಜ್ಯ ಹಾಗೂ ಜಿಲ್ಲಾ ಸಿಬ್ಬಂದಿಗಳಿಗೆ ವೇತನ, ಪರಿಷತ್ತಿನ ಪ್ರಕಟಣೆ, ದಲಿತ ಸಂಪುಟಗಳು, ಮಹಿಳಾ ಸಂಪುಟಗಳು ಇತ್ಯಾದಿ ಹಾಗೂ ಪರಿಷತ್ತಿನ ಆಡಳಿತಾತ್ಮಕ ಕಾರ್ಯ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗಿದೆ.
ಇ	ಕಳೆದ 5 ವರ್ಷದಿಂದ ಲೆಕ್ಕಪರಿಶೋಧನೆ ಯಾಗಿದೆಯೇ; ಹಾಗಿದ್ದಲ್ಲಿ, ವರದಿಯ ಪ್ರತಿಯನ್ನು ಒದಗಿಸುವುದು;	2016-17, 2017-18, 2018-19 ಮತ್ತು 2019-20ನೇ ಸಾಲಿನಲ್ಲಿ ಲೆಕ್ಕಪರಿಶೋಧನೆ ಆಗಿರುತ್ತದೆ. (ಅನುಬಂಧ-1) 2020-21ನೇ ಸಾಲಿನ ಲೆಕ್ಕಪರಿಶೋಧನೆ ಆಗಬೇಕಾಗಿದೆ.
ಈ	ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಲ್ಲಿ ಸರ್ಕಾರದಿಂದ ಎಷ್ಟು ಸಿಬ್ಬಂದಿಗೆ ವೇತನ ನೀಡಲಾಗುತ್ತಿದೆ;	ಕನ್ನಡ ಸಾಹಿತ್ಯ ಪರಿಷತ್ತಿನ 4 ಖಾಯಂ ಸಿಬ್ಬಂದಿ ಹಾಗೂ 39 ಸಂಚಿತ ವೇತನದ ಸಿಬ್ಬಂದಿ ಒಟ್ಟು 43 ಸಿಬ್ಬಂದಿಗಳಿಗೆ ಪರಿಷತ್ತಿನಿಂದ ವೇತನ ನೀಡಲಾಗುತ್ತಿದೆ.
ಉ	ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಸಂಖ್ಯೆಯೆಷ್ಟು; (ಹುದ್ದೆಗಳ ವಿವರಗಳನ್ನು ಒದಗಿಸುವುದು).	ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗುತ್ತಿಗೆ ಆಧಾರದ ಮೇಲೆ ಯಾವುದೇ ಸಿಬ್ಬಂದಿಗಳನ್ನು ನೇಮಿಸಿಕೊಂಡಿರುವುದಿಲ್ಲ.
ಊ	ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ?	ಪ್ರಶ್ನೆ ಉದ್ಭವಿಸುವುದಿಲ್ಲ.
ಋ	ಸಾಹಿತ್ಯ ಪರಿಷತ್ತು, ಪ್ರಸ್ತುತ ಎಷ್ಟು ಸದಸ್ಯರನ್ನು ಹೊಂದಿದೆ.	ಕನ್ನಡ ಸಾಹಿತ್ಯ ಪರಿಷತ್ತು 3,40,000 ಆಜೀವ ಸದಸ್ಯರನ್ನು ಹೊಂದಿರುತ್ತದೆ.

ಎ	2021ನೇ ಸಾಲಿನಲ್ಲಿ ನಡೆದ ಪರಿಷತ್ತಿನ ಚುನಾವಣೆಗೆ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ.	2020-21ನೆಯ ಸಾಲಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.
ಏ	ಸಾಹಿತ್ಯ ಪರಿಷತ್ತಿನ ಚುನಾವಣೆಗೆ ಸ್ಪರ್ಧಿಸಲು ಇರಬೇಕಾದ ಅರ್ಹತೆ ಹಾಗೂ ಮಾನದಂಡಗಳೇನು: ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಚಟುವಟಿಕೆಗಳೇನು? (ಬೈಲಾ ಪ್ರತಿಯನ್ನು ಒದಗಿಸುವುದು).	• ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಸ್ಥಾನಕ್ಕೆ ಸ್ಪರ್ಧಿಸುವವರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು. 1. ಕನ್ನಡ ಬಲ್ಲವರಾಗಿರಬೇಕು. 2. ಚುನಾವಣಾ ತಾರೀಖಿಗೆ ಹತ್ತು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು. 3. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಸಾಕಷ್ಟು ಸೇವೆ ಮಾಡಿರುವವರಾಗಿರತಕ್ಕದ್ದು. ನಿಬಂಧನೆ ಕಂಡಿಕೆ 18(ಅ)ರಲ್ಲಿ ವಿವರ ನೀಡಿದೆ. (ಅನುಬಂಧ-2) • ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಭಾಷೆ, ಅಖಿಲ ಭಾರತ ಸಾಹಿತ್ಯ ಸಮ್ಮೇಳನ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಇವುಗಳ ರಕ್ಷಣೆ, ಪ್ರಸಾರ ಮತ್ತು ಅಭಿವೃದ್ಧಿಗಾಗಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತದೆ. • ಬೈಲಾ ಪ್ರತಿಯನ್ನು ಅನುಬಂಧ-3ರಲ್ಲಿರಿಸಿದೆ.

ಸಂಖ್ಯೆ:ಕಸಂವಾ 93 ಕವಿಸ 2021

(ವಿ.ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ-1

1

ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು-18

ಅನುಬಂಧ -6 ಕಂಡಿಕೆ-15

ಕರ್ನಾಟಕ ಸರ್ಕಾರದ ಈ ಕೆಳಕಂಡ ಆದೇಶಗಳಂತೆ 2016-17ನೇ ಸಾಲಿನ ಅನುದಾನ/ಧನಸಹಾಯ ಸ್ವೀಕೃತಿ, ಪಾವತಿ ಮತ್ತು 31-3-2017ರ ಅಂತ್ಯಕ್ಕೆ ಶಿಲ್ಕು

ಕ್ರ.ಸಂ	ಕಾಮಗಾರಿಯ ವಿವರ [illegible]	ಪ್ರಾರಂಭಿಕ ಶಿಲ್ಕು [illegible]	2016-17ರಲ್ಲಿ [illegible]		ಒಟ್ಟು	ಖರ್ಚು 2015-16	ಖರ್ಚು 2016-17		[illegible]
1	[illegible] 12-13 92,16,395-00 13-14 38,06,641-00 14-15 50,00,814-00	— 1,80,18,850-00	3,22,60,000-00 —		3,22,60,000-00 1,80,18,850-00 1,02,78,850-00	[illegible] 57,18,162-00 [illegible] 57,18,162-00	90,7,066-00 1,30,504-00 [illegible]	83,78,116-00	[illegible]
2	2016-17ನೇ ಸಾಲಿನ [illegible]		4,00,00,000-00		4,00,00,000-00	[illegible]	42,45,258-94	3,57,54,741-06	[illegible]
3	[illegible] 125/ [illegible]/2009, [illegible]	1512014	—		1512014		3,12,820-00	12,00,194-00	[illegible]
4	ಕನ್ನಡ ಸಾಹಿತ್ಯ ಪರಿಷತ್ತಿನ [illegible] [illegible]/2014/[illegible] 21-3-14	2,50,00,000	—		2,50,00,000		1,05,00,000-00	1,45,00,000-00	[illegible]
	ಒಟ್ಟು	4,45,30,864	9,22,60,000		13,67,90,864	57,18,162-00	7,12,19,650.94	5,98,33,051-06	

ಗೌರವ ಕಾರ್ಯದರ್ಶಿಗಳು
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ ಬೆಂಗಳೂರು-18

ಗೌರವ ಕೋಶಾಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು – 18

ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು – 18

ಸ್ಥಳೀಯ ಲೆಕ್ಕಪರಿಶೋಧ[illegible]
ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು-18

ಅನುಬಂಧ -6 ಕಂಡಿಕೆ- 15

ಕರ್ನಾಟಕ ಸರ್ಕಾರ ಈ ಕೆಳಕಂಡ ಆದೇಶಗಳಂತೆ 2017-18ನೇ ಸಾಲಿಗೆ ಅನುದಾನ/ಧನಸಹಾಯ ನೀಡಿದ್ದು, ಹಣಬಳಕೆ ವಿವರ-31-3-2018ರ ಅಂತ್ಯಕ್ಕೆ ಲೆಕ್ಕಪಟ್ಟಿ

ಕ್ರ.ಸಂ.	ಸಹಾಯಧನದ ವಿವರ ಆದೇಶ/ ಆದೇಶಸಂಖ್ಯೆ	ಪ್ರಾರಂಭಿಕ ಶಿಲ್ಕು ಸಹಾಯಧನದ	2017-18ರಲ್ಲಿ ಬಿಡುಗಡೆ		ಒಟ್ಟು	ಖರ್ಚು 2017-18	31.03.2018ಕ್ಕೆ ಉಳಿಕೆ	ಷರಾ
1.	2012-13ನೇ ಸಾಲಿನಿಂದ 2016-17ನೇ ಸಾಲಿನವರೆಗೂ ಬಂದಿರುವ ಸಹಾಯಧನದಲ್ಲಿ ಉಳಿಕೆ ಹಣ	4,41,32,857.00	-		4,41,32,857.00	1,71,01,846.00	2,70,31,011.00	31.03.2018ಕ್ಕೆ ಇರುವ ಉಳಿಕೆ ಮೊತ್ತಕ್ಕೆ ಹೊಸ ಕ್ರಿಯಾಯೋಜನೆಯನ್ನು ರೂಪಿಸಿದ್ದು, ಅದರಂತೆ ವೆಚ್ಚ ಭರಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.
2.	2017-18ನೇ ಸಾಲಿನಲ್ಲಿ ಕಸಾಪ ಕ್ರಿಯಾಯೋಜನೆಯಂತೆ ಸಹಾಯಧನ	-	12,00,00,000.00		12,00,00,000.00	7,01,19,886.00	4,98,80,114.00	---
3.	ಸಂಶೋಧನಾ ಕೇಂದ್ರ ಯೋಜನೆ ಕಸಂವಾ/125/ಕಸಧ/2009/6-8-2009	12,00,194.00	-		12,00,194.00	3,19,574.00	8,80,620.00	---
4.	ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಸ್ಮಾರಕ ಭವನ ನಿರ್ಮಾಣಕ್ಕಾಗಿ ಸಹಾಯ ಧನ ಕಸಂವಾ/125/ಕಸಧ/2009/6-8-2009	1,45,00,000.00	-		1,45,00,000.00	1,45,00000.00	-	---
		5,98,33,051.00	12,00,00,000.00		17,98,33,051.00	10,20,41,306.00	7,77,91,745.00	

ಗೌರವ ಕೋಶಾಧ್ಯಕ್ಷರು

ಅಧ್ಯಕ್ಷರು

ಉಪ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಬೆಂಗಳೂರು

(18) 3

ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು-18

ಅನುಬಂಧ - 6 ಕಂಡಿಕೆ- 22

ಕರ್ನಾಟಕ ಸರ್ಕಾರ ಈ ಕೆಳಕಂಡ ಆದೇಶಗಳಂತೆ 2018-19ನೇ ಸಾಲಿಗೆ ಅನುದಾನ/ಧನಸಹಾಯ ನೀಡಿದ್ದು, ಬಳಕೆ ವಿವರ-31-3-2019ರ ಅಂತ್ಯಕ್ಕೆ ಲೆಕ್ಕಪಟ್ಟಿ

ಕ್ರ.ಸಂ.	ಸಹಾಯಧನದ ವಿವರ ಶೀರ್ಷಿಕೆ/ ಆದೇಶಸಂಖ್ಯೆ	ಪ್ರಾರಂಭಿಕ ಶಿಲ್ಕು ಸಹಾಯಧನದ	2018-19ರಲ್ಲಿ ಬಿಡುಗಡೆ		ಒಟ್ಟು	ಖರ್ಚು 2018-19	31.03.2019ಕ್ಕೆ ಉಳಿಕೆ	ಷರಾ
1.	ಮಾರ್ಚ್ 2018 ರ ಅಂತ್ಯಕ್ಕೆ 2,70,31,011.00 4,98,80,114.00	7,69,11,125.00	--		7,69,11,125.00	3,05,51,641.00	4,63,59,484.00	ಕ್ರಿಯಾಯೋಜನೆ 2019-2020ನೇ ಸಾಲಿಗೆ ಮುಂದುವರೆದಿದೆ.
2.	ಸಂಶೋಧನಾ ಕೇಂದ್ರ ಯೋಜನೆ ಕಸಂವಾ/125/ಕಸಧ/2009/6-8-2009	8,80,620.00	--		8,80,620.00	4,22,755.00	4,57,865.00	
3.	2018-19ನೆ ಸಾಲಿಗೆ ಸರ್ಕಾರದ ಸಹಾಯ ಧನ	--	7,00,00,000.00		7,00,00,000.00	7,00,00,000.00	--	
	ಒಟ್ಟು	7,77,91,745.00	7,00,00,000.00		14,77,91,745.00	10,09,74,396.00	4,68,17,349.00	

ಕೋಶಾಧ್ಯಕ್ಷರು ಅಧ್ಯಕ್ಷರು

ಉಪ ನಿರ್ದೇಶಕರು
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಬೆಂಗಳೂರು

ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು-18

ಅನುಬಂಧ – 6 ಕಂಡಿಕೆ–

ಕರ್ನಾಟಕ ಸರ್ಕಾರ ಈ ಕೆಳಕಂಡ ಆದೇಶಗಳಂತೆ 2019–20ನೇ ಸಾಲಿಗೆ ಅನುದಾನ/ಧನಸಹಾಯ ನೀಡಿದ್ದು, ಘಟಾಬಳಿ ವಿವರ–31–3–2020ರ ಅಂತ್ಯಕ್ಕೆ ಲೆಕ್ಕಪಟ್ಟಿ

ಕ್ರ.ಸಂ.	ಸಹಾಯಧನದ ವಿವರ ಶೀರ್ಷಿಕೆ/ ಆದೇಶಸಂಖ್ಯೆ	ಪ್ರಾರಂಭಿಕ ಶಿಲ್ಕು ಸಹಾಯಧನದ	2019–20ರಲ್ಲಿ ಬಿಡುಗಡೆ		ಒಟ್ಟು	ಖರ್ಚು 2019–20	31.03.2020ಕ್ಕೆ ಉಳಿಕೆ	ಷರಾ
1.	ಮಾರ್ಚ್_2019 ರ ಅಂತ್ಯಕ್ಕೆ	4,63,59,484–00			4,63,59,484–00	3,21,52,020–00	1,42,07,464–00	ಕ್ರಿಯಾಯೋಜನೆ ಹಾಕಿಕೊಂಡಂತೆ 2020–2021ನೇ ಸಾಲಿಗೆ ಹೊಂದಾಣಿಕೆ
2.	ಸಂಶೋಧನಾ ಕೇಂದ್ರ ಯೋಜನೆ	4,57,865–00	--		4,57,865–00	1,78,250–00	2,79,615–00	–
3.	2019–20ನೆಯ ಸಾಲಿಗೆ ಸರ್ಕಾರದ ಸಹಾಯ ಧನ	–	5,00,00,000–00		5,00,00,000–00	5,00,00,000–00	–	–
	ಒಟ್ಟು	4,68,17,349–00	5,00,00,000–00		9,68,17,349–00	8,23,30,270–00	1,44,87,079–00	–

ಗೌರವ ಕೋಶಾಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು–18

ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು–18

ಜಂಟಿ ನಿರ್ದೇಶಕರು
[illegible]

೧೬. ಗಡಿನಾಡ ಘಟಕಗಳು

ಅ) ಗಡಿನಾಡ ಘಟಕಗಳಲ್ಲಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ ಮತ್ತು ತೆಲಂಗಾಣ ಈ ರಾಜ್ಯಗಳಲ್ಲಿ ಕನಿಷ್ಠ ೧೦೦ (ಒಂದು ನೂರು) ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಅಲ್ಲಿ ಗಡಿನಾಡ ಘಟಕಗಳನ್ನು ರಚಿಸತಕ್ಕದ್ದು. ಇಂತಹ ಗಡಿನಾಡ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು. ಗಡಿನಾಡ ಘಟಕದ ಅಧ್ಯಕ್ಷರನ್ನು ಆಯಾ ಘಟಕದ ಸದಸ್ಯರು ಅಂಚೆ ಮೂಲಕ ಮತ ಚಲಾಯಿಸಿ ಆಯ್ಕೆ ಮಾಡತಕ್ಕದ್ದು. ಲೆಕ್ಕಪತ್ರ ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ ನಿಯಮಗಳೇ ಇದಕ್ಕೂ ಅನ್ವಯಿಸುತ್ತವೆ. ಉಳಿದಂತೆ ಗಡಿನಾಡ ಘಟಕಗಳ ಉಪ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

ಆ) ಭಾರತದ ಇತರ ರಾಜ್ಯಗಳಲ್ಲಿ ೫೦೦ ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಆಯಾ ರಾಜ್ಯಗಳಲ್ಲಿ ಹೊರನಾಡ ವಿಶೇಷ ಘಟಕ ತೆರೆಯಬಹುದು. ಇಂತಹ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು.

೧೭. ಜಿಲ್ಲಾ ಘಟಕ, ತಾಲ್ಲೂಕು ಘಟಕ ಹಾಗೂ ಗಡಿನಾಡ ಘಟಕ/ಕ್ಷೇತ್ರ ಘಟಕಗಳ ಕಾರ್ಯಕಾರಿ ಸಮಿತಿ ಸಭೆಗಳು ವರ್ಷದಲ್ಲಿ ಕನಿಷ್ಠ ಮೂರು ಸಲ ಸೇರಬೇಕು.

೧೮. ಕಾರ್ಯಕಾರಿ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರ ಆಯ್ಕೆ

ಅ) ಪರಿಷತ್ತಿನ ಅಧ್ಯಕ್ಷರನ್ನು ಪರಿಷತ್ತಿನ ಮತದಾರರ ಪಟ್ಟಿಯಲ್ಲಿರುವ ಎಲ್ಲ ಸದಸ್ಯರೂ ಚುನಾಯಿಸತಕ್ಕದ್ದು. ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಲ್ಲುವವರು ಕನ್ನಡ ಬಲ್ಲವರಾಗಿದ್ದು, ಚುನಾವಣಾ ತಾರೀಖಿಗೆ ಹತ್ತು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು. ಅಧ್ಯಕ್ಷತೆಗೆ ನಿಲ್ಲುವವರು ಕನ್ನಡ ಭಾಷೆ ಸಾಹಿತ್ಯ, ಸಂಸ್ಕೃತಿಗಳಲ್ಲಿ ಸಾಕಷ್ಟು ಸೇವೆ ಮಾಡಿರುವವರಾಗಿರತಕ್ಕದ್ದು.

ಆ) ಪರಿಷತ್ತಿನ ಅಧ್ಯಕ್ಷರ ಅಧಿಕಾರಾವಧಿ ಐದು ವರ್ಷ ಮಾತ್ರ ಇರತಕ್ಕದ್ದು. ಒಂದು ಸಾರಿ ಅಧ್ಯಕ್ಷರಾಗಿ ಚುನಾಯಿತರಾದವರು ಮುಂದಿನ ಅವಧಿಯ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಆದರೆ ಮುಂದಿನ ಅವಧಿ ಕಳೆದ ನಂತರ ಮತೆ ಅವರು ಸರ್ದಿಸುವದಕೆ ಅವಕಾಶವಿರತಕದು (ಒಂದು ಅವದಿಯಲಿ

ಇ) ಯಾವ ಕಾರಣದಿಂದಲಾದರೂ ಕಾರ್ಯಕಾರಿಸಮಿತಿ ಚುನಾವಣೆ ತಡವಾದರ ಮುಂದೆ ಚುನಾವಣೆ ನಡೆಯುವವರೆಗೆ ಹಿಂದಿನ ಕಾರ್ಯಕಾರಿ ಸಮಿತಿಯೇ ಪರಿಷತ್ತಿನ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಈ ರೀತಿ ಮುಂದು ವರಿದ ಅವಧಿ ಆರು ತಿಂಗಳುಗಳಿಗೆ ಮೀರತಕ್ಕದ್ದಲ್ಲ.

ಈ) ಯಾವ ಕಾರಣದಿಂದಲಾದರೂ ಅಧ್ಯಕ್ಷ ಸ್ಥಾನ ತೆರವಾದಾಗ ಇನ್ನುಳಿ ಅವಧಿಯವರೆಗೆ ಪರಿಷತ್ತಿನ ಕಾರ್ಯಕಾರಿ ಸಮಿತಿ, ಕಾರ್ಯಕಾ ಸಮಿತಿಯ ಚುನಾಯಿತ ಸದಸ್ಯರಲ್ಲಿ ಯಾರನ್ನಾದರೂ ಒಬ್ಬರನ ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು.

ಉ) ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದರ ಮೂಲ ತಾತ್ಕಾಲಿಕವಾಗಿ (ಆರು ತಿಂಗಳಿಗೆ ಕಡಿಮೆಯಿಲ್ಲದೆ ಒಂದು ವರ್ಷಕ್ಕೆ ಹೆಚ್ಚಾಗದ ಅವಧಿಯಲ್ಲಿ) ಕಾರ್ಯನಿರ್ವಹಿಸಲು ಸಾಧ್ಯವಾಗದಿದ್ದ ಆ ಕಾಲ ಪರ್ಯಂತ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಒಬ್ಬರಿ ಆ ಅಧಿಕಾರವನ್ನು ವಹಿಸಿಕೊಡಲು ಅಧ್ಯಕ್ಷರಿಗೆ ಅಧಿಕಾರವಿರುತ್ತದೆ.

ಊ) ಒಂದು ವರ್ಷಕ್ಕೆ ಮೀರಿ ಅಧ್ಯಕ್ಷರು ಗೈರು ಹಾಜರಾಗುವುದಾದರೆ ಸ್ಥಾನ ತೆರವಾಗಿದೆ ಎಂದೇ ಪರಿಗಣಿಸತಕ್ಕದ್ದು.

೧೯. ಕಾರ್ಯದರ್ಶಿಗಳ, ಕೋಶಾಧ್ಯಕ್ಷರ ಆಯ್ಕೆ

ಅ) ಇಬ್ಬರು ಕಾರ್ಯದರ್ಶಿಗಳನ್ನೂ, ಒಬ್ಬರು ಕೋಶಾಧ್ಯಕ್ಷರನ್ನೂ ಆರಿ ಕೊಳ್ಳುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು. ಅವರು ಪರಿಷತ್ತಿ ಸದಸ್ಯರಾಗಿರತಕ್ಕದ್ದು.

ಆ) ಕಾರ್ಯಕಾರಿ ಸಮಿತಿಯ ಸಭೆ

ಕಾರ್ಯಕಾರಿ ಸಮಿತಿಯ ಸಭೆ ವರ್ಷಕ್ಕೆ ಕನಿಷ್ಠ ಪಕ್ಷ ನಾಲ್ಕು ಸಲ ಸೇ ತಕ್ಕದ್ದು.

ಇ) ಪರಿಷತ್ತಿನ ಅಧ್ಯಕ್ಷರೇ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆಯನ ವಹಿಸತಕ್ಕದ್ದು. ಅವರು ಹಾಜರಿಲ್ಲದಿರುವಾಗ ಕಾರ್ಯಕಾರಿ ಸಮಿತಿಯ [illegible]

ಅನುಬಂಧ - 3

6



ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು – ೫೬೦ ೦೧೮

ನಿಬಂಧನೆಗಳು

(ಮೈಸೂರು ಸಂಸ್ಥಾನದ ಸಾರ್ವಜನಿಕ ಸಂಘಗಳ ಸಂಬಂಧವಾದ ಕಾನೂನಿನ ಮೇರೆಗೆ ಸರ್ಕಾರದಲ್ಲಿ ರಿಜಿಸ್ಟರಾಗಿದೆ. ರಿ.ನಂಬರು ೩೨೮/೧೯೧೫-೧೬ : ದಿನಾಂಕ ೧೨-೧೧-೧೯೧೫)

ಸ್ಥಾಪನೆ : ದಿನಾಂಕ : ೫-೫-೧೯೧೫

ದಿನಾಂಕ ೨೫-೧೧-೧೯೭೩, ೯-೭-೧೯೮೩, ೧೫-೫-೧೯೮೮ ಹಾಗೂ ೩೦-೯-೧೯೯೦ರಂದು ಸೇರಿದ್ದ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆಯಲ್ಲಿ ತಿದ್ದುಪಡಿಯಾಗಿ ಅಂಗೀಕಾರವಾಗಿದ್ದು, ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಕ್ರಮವಾಗಿ ಸಂಖ್ಯೆ ಸಿ.ನಂ.ಎ.ಎಂ.ಆರ್. ೨೩೫-೭೩-೭೪, ದಿನಾಂಕ ೮-೩-೧೯೭೪ ಎ.ಎಂ.ಆರ್. ೮೫, ೮೩-೮೪ ದಿನಾಂಕ ೨೧-೧೧-೧೯೮೩ ಹಾಗೂ ಎ.ಎಂ.ಆರ್.೮೩, ೮೮-೮೯ ದಿನಾಂಕ ೩೦-೬-೧೯೮೮ ಎ.ಎಂ.ಆರ್. ೧೩೦/೯೧-೯೨ ದಿನಾಂಕ ೨೬-೧೧-೧೯೯೧. ಹಾಗೂ ದಿನಾಂಕ ೨೮-೯-೧೯೯೭ರಂದು ಸೇರಿದ್ದ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆಯಲ್ಲಿ ತಿದ್ದುಪಡಿಯಾಗಿ, ಅಂಗೀಕಾರವಾಗಿದ್ದು, ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಸಂಖ್ಯೆ ಎ.ಎಂ.ಆರ್.೭೯/೯೭-೯೮ ದಿನಾಂಕ ೧೫-೪-೧೯೯೮ ಹಾಗೂ ದಿನಾಂಕ ೧೫-೦೩-೨೦೧೮ರಂದು ಸೇರಿದ್ದ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆಯಲ್ಲಿ ತಿದ್ದುಪಡಿಯಾಗಿ, ಅಂಗೀಕಾರವಾಗಿದ್ದು, ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಎಎಂಆರ್ ಸಂಖ್ಯೆ : ೫೭/೨೦೧೮-೧೯ ದಿನಾಂಕ ೨೫-೦೨-೨೦೧೯ರ ಪ್ರಕಾರ ಒಪ್ಪಿಗೆ ಪಡೆದಿದೆ.

ದಿನಾಂಕ : ೨೭-೦೨-೨೦೧೯

ಬೆಲೆ : ಐದು ರೂಪಾಯಿಗಳು.

(3)

ನಿಬಂಧನೆಗಳು

ಹೆಸರು

೧. (ಅ) ಈ ಸಂಸ್ಥೆಯ ಹೆಸರು ಕನ್ನಡ ಸಾಹಿತ್ಯ ಪರಿಷತ್ತು ಎಂದು ಇರತಕ್ಕದ್ದು.

(ಆ) ಈ ನಿಬಂಧನೆಗಳಲ್ಲಿ ಮುಂದೆ ಇದನ್ನು 'ಪರಿಷತ್ತು' ಎಂದು ಕರೆಯಲಾಗುವುದು.

ವ್ಯಾಪ್ತಿ

೨. ಪರಿಷತ್ತಿನ ಕಾರ್ಯವ್ಯಾಪ್ತಿ ಕರ್ನಾಟಕ ಮತ್ತು ಕನ್ನಡ ಭಾಷೆ ಬಳಕೆಯಲ್ಲಿ ಇರುವ ಎಲ್ಲಾ ಪ್ರದೇಶಗಳನ್ನೂ ಒಳಗೊಂಡಿರಬೇಕು.

ಕಾರ್ಯಾಲಯ

೩. ಪರಿಷತ್ತಿನ ಕೇಂದ್ರ ಕಾರ್ಯಾಲಯವು ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮ ರಲ್ಲಿ ಇರತಕ್ಕದ್ದು.

ಉದ್ದೇಶ

೪. ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಜನಪದ ಇವುಗಳ ರಕ್ಷಣೆ, ಪ್ರಸಾರ ಮತ್ತು ಅಭಿವೃದ್ಧಿ ಆಗಿರತಕ್ಕದ್ದು.

ಕಾರ್ಯಸಾಧನೆ

೫. (ಅ) ನಾಲ್ಕನೆಯ ನಿಬಂಧನೆಯಲ್ಲಿ ನಿರೂಪಿತವಾದ ಪರಿಷತ್ತಿನ ಉದ್ದೇಶ ಸಾಧನೆಗೆ ಈ ಕೆಳಗೆ ಕಾಣಿಸಿರುವ ಕಾರ್ಯಗಳನ್ನು ಕೈಗೊಳ್ಳತಕ್ಕದ್ದು.

(ಆ) ಸಮ್ಮೇಳನ, ಸಾಹಿತ್ಯೋತ್ಸವ, ನಾಡಹಬ್ಬ ಮುಂತಾದ ಉತ್ಸವಗಳು, ಉಪನ್ಯಾಸಗಳು, ಸ್ಪರ್ಧೆಗಳು, ಕಲಾ ಪ್ರದರ್ಶನಗಳು ಹಾಗೂ ವಿಚಾರ ಸಂಕಿರಣಗಳು, ಗೋಷ್ಠಿಗಳು, ಕಮ್ಮಟ, ಕಾರ್ಯಾಗಾರಗಳು, ಕನ್ನಡ ಶಾಲೆಗಳ ಸ್ಥಾಪನೆ, ಅವುಗಳಿಗೂ ಮತ್ತು ಸಾಕ್ಷರತಾ ಪ್ರಚಾರಕ್ಕೂ ಪ್ರೋತ್ಸಾಹ

(ಇ) ಓಲೆ ಪ್ರತಿಗಳ ಸಂಗ್ರಹ, ಹಳೆಯ ಗ್ರಂಥಗಳ ಪ್ರಕಟಣೆ, ತಾಮ್ರಪಟ, ಶಿಲಾಶಾಸನಪ್ರತಿಗಳು, ಐತಿಹಾಸಿಕಕಾಗದಪತ್ರಗಳು, ನಾಣ್ಯಗಳು ಇತ್ಯಾದಿ ಪ್ರಾಚ್ಯ ವಸ್ತುಗಳ ಸಂಗ್ರಹ.

(ಈ) ಸಂಶೋಧನಾ ಶಾಖೆಯ ಏರ್ಪಾಡು, ಸಾಹಿತ್ಯ, ಕಲೆ, ಇತಿಹಾಸ ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ವ್ಯವಸ್ಥೆ, ಸಂಶೋಧಕರಿಗೆ ಸೌಕರ್ಯ.

(ಉ) ವ್ಯಾಕರಣ, ನಿಘಂಟು, ಚರಿತ್ರೆ, ವಿಜ್ಞಾನ, ಸಮಾಜವಿಜ್ಞಾನ, ಮಾನವಿಕ, ಪರಿಶೋಧನೆ, ತತ್ವವಿಚಾರ, ಪಾರಿಭಾಷಿಕಕೋಶ, ಸಾಹಿತ್ಯ, ಕಲೆ, ಧರ್ಮ, ದರ್ಶನ ಇತ್ಯಾದಿ ವಿಷಯಗಳನ್ನು ಕುರಿತು ಗ್ರಂಥ ಪ್ರಕಟಣೆಗೆ ಸಹಾಯ ಪ್ರಚಾರ ಮತ್ತು ಮಾರಾಟ.

(ಊ) ವಿವಿಧ ವಿಷಯಗಳ ಉತ್ತಮ ಗ್ರಂಥಗಳನ್ನು ಇತರ ಭಾಷೆಗಳಿಂದ ಕನ್ನಡಕ್ಕೆ, ಉತ್ತಮ ಕನ್ನಡಗ್ರಂಥಗಳನ್ನು ಇತರ ಭಾಷೆಗಳಿಗೆ ಭಾಷಾಂತರ ಮಾಡಿಸುವುದು, ಪ್ರಕಟಿಸುವುದು, ಪ್ರಚಾರ ಮತ್ತು ಮಾರಾಟ ಮಾಡುವುದು.

ಋ) ಸಾಹಿತ್ಯ, ಶಾಸನಶಾಸ್ತ್ರ, ಪತ್ರಿಕೋದ್ಯಮ, ಗಮಕ, ಸಂಗೀತ, ಜಾನಪದ ತರಗತಿಗಳು ಮತ್ತು ಪರೀಕ್ಷೆಗಳು, ಸ್ಪರ್ಧೆಗಳ ಏರ್ಪಾಟು.

ೠ) ಪರಿಷತ್ತಿನ ಕಾರ್ಯಕಲಾಪಗಳ ಪ್ರಸಾರಕ್ಕೆ ಮತ್ತು ಸಾಹಿತ್ಯ ಕಲೆಗಳ ಉತ್ಕರ್ಷಕ್ಕೆ 'ಕನ್ನಡ ನುಡಿ' (ಮಾಸಿಕ) ಮತ್ತು 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ' (ಷಾಣ್ಮಾಸಿಕ) ಮೊದಲಾದ ನಿಯತಕಾಲಿಕೆಗಳನ್ನು ಪ್ರಕಟಿಸತಕ್ಕದ್ದು.

ಎ) ಕರ್ನಾಟಕ ಗಡಿನಾಡು ಹೊರನಾಡು ಪ್ರದೇಶಗಳ ಅಭಿವೃದ್ಧಿಗೆ ಶ್ರಮಿಸಬೇಕು.

ಏ) ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿ ಸರಕಾರ ಮತ್ತು ಇತರ ಸಂಸ್ಥೆಗಳು ಕೈಗೊಳ್ಳುವ ಕಾರ್ಯದಲ್ಲಿ ಸಹಕರಿಸುವುದು ಮತ್ತು ಸಲಹೆ ಸೂಚನೆಗಳನ್ನು ಕೊಡುವುದು.

೬. ಪಾಂಡಿತ್ಯ ಪೋಷಣೆ

ಅ) ಭಾಷೆ, ಸಾಹಿತ್ಯ ಇತಿಹಾಸ, ಕಲೆ ಶಾಸ್ತ್ರ, ದರ್ಶನ ಮುಂತಾದ ಕ್ಷೇತ್ರಗಳಲ್ಲಿ ವಿಶೇಷ ಜ್ಞಾನಾನುಭವವುಳ್ಳ ಹಿರಿಯ ವಿದ್ವಾಂಸರನ್ನೂ, ಸಾಹಿತಿಗಳನ್ನೂ ಆಗಾಗ ಒಂದೊಂದು ಕಡೆ ಸೇರಿಸಿ ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸುವುದು.

ಆ) ಪ್ರೌಢ ಗ್ರಂಥಗಳ ನಿರ್ಮಾಪಕರಿಗೆ ಪ್ರೋತ್ಸಾಹ ಮತ್ತು ಧನಸಹಾಯ ನೀಡುವುದು

ಇ) ಕನ್ನಡದ ಹಿರಿಯ ವಿದ್ವಾಂಸರಿಗೂ ಸಾಹಿತಿಗಳಿಗೂ ಸನ್ಮಾನ, ಪ್ರಶಸ್ತಿ, ಬಹುಮಾನ, ಗೌರವ ಸದಸ್ಯತ್ವ (ಫೆಲೋಷಿಪ್) ನೀಡುವುದು.

ಈ) ಉದಯೋನ್ಮುಖ ಲೇಖಕರಿಗೆ ಪ್ರೋತ್ಸಾಹ ನೀಡುವುದು. ಇವುಗಳಲ್ಲದೆ ಮೂಲ ಉದ್ದೇಶಗಳನ್ವಯ ಇಂಥ ಇತರ ಕಾರ್ಯಗಳನ್ನೂ ಪರಿಷತ್ತು ಕೈಗೊಳ್ಳತಕ್ಕದ್ದು.

೭. ಅಂಗರಚನೆ

ಪರಿಷತ್ತಿನ ಉದ್ದೇಶಗಳನ್ನು ಅಂಗೀಕರಿಸಿ ಅದರೊಡನೆ ಸಹಕರಿಸಲು ಬದ್ಧರಾಗುವ ಕನ್ನಡ ಸಂಸ್ಥೆಗಳು ಮತ್ತು ೧೮ ವರ್ಷಗಳ ಮೇಲ್ಪಟ್ಟ ವಯಸ್ಸಿನ ಕನ್ನಡ ಓದು ಬರಹ ಬಲ್ಲ ಎಲ್ಲ ವ್ಯಕ್ತಿಗಳೂ ಸದಸ್ಯತ್ವವನ್ನು ಪಡೆಯಬಹುದು.

ಸದಸ್ಯರಲ್ಲಿ ಈ ಕೆಳಕಂಡಂತೆ ವರ್ಗಗಳಿರತಕ್ಕದ್ದು.

ಅ) ಪೋಷಕರು	ರೂ.	೧೦,೦೦೦
ಆ) ದಾತೃಗಳು	ರೂ.	೫,೦೦೦
ಇ) ಆಜೀವ ಸದಸ್ಯರು	ರೂ.	೫೦೦
ಕನ್ನಡ ನುಡಿ ಚಂದಾದಾರರು	ರೂ.	೫೦೦
ಒಟ್ಟು	ರೂ.	೧,೦೦೦
ಈ) ಪೋಷಕ ಸಂಸ್ಥೆಗಳು	ರೂ.	೫೦,೦೦೦
ಉ) ದಾತೃ ಸಂಸ್ಥೆಗಳು	ರೂ.	೨೦,೦೦೦
ಊ) ಆಜೀವ ಸಂಸ್ಥೆಗಳು	ರೂ.	೫,೦೦೦
ಋ) ಮಹಾ ಪೋಷಕ ಸಂಸ್ಥೆಗಳು	ರೂ.	೧,೦೦,೦೦೦

ಎ) ವಾರ್ಷಿಕ ಸದಸ್ಯರ ಶುಲ್ಕ ಹಾಗೂ ವಾರ್ಷಿಕ ಸದಸ್ಯ ಸಂಸ್ಥೆಗಳ ಶುಲ್ಕವನ್ನು ಹೊರತುಪಡಿಸಿ ಉಳಿದ ಎಲ್ಲ ವರ್ಗದ ಸದಸ್ಯತ್ವದ ಶುಲ್ಕವನ್ನು ಸ್ಥಾಯಿನಿಧಿಗೆ ಸೇರಿಸತಕ್ಕದ್ದು. ಸ್ಥಾಯಿನಿಧಿಯ ಹಣವನ್ನು ಯಾವ ಕಾರಣದಿಂದಲೂ ಸರ್ವ ಸದಸ್ಯರ ಸಭೆಯ ಅನುಮತಿ ಇಲ್ಲದೇ ಬಳಸತಕ್ಕದ್ದಲ್ಲ. ಈ ನಿಧಿಯಿಂದ ಬರುವ ಬಡ್ಡಿಯನ್ನು ಮಾತ್ರ ಪರಿಷತ್ತಿನ ಚಟುವಟಿಕೆಗಳಿಗೆ ಬಳಸತಕ್ಕದ್ದು.

೮. ಅ) ಸದಸ್ಯರಾಗಿ ಸೇರಲು ಬಯಸುವ ವ್ಯಕ್ತಿ ಅಥವಾ ಸಂಸ್ಥೆಯು ಪರಿಷತ್ತಿನಿಂದ ಪಡೆದ ಅಧಿಕೃತ ಅಪೇಕ್ಷಾ ಪತ್ರದಲ್ಲಿ (ಅರ್ಜಿಯಲ್ಲಿ) ವಿವರವಾಗಿ ೭ನೆಯ ನಿಬಂಧನೆಯಲ್ಲಿ ಕಾಣಿಸಿರುವ ಆಯಾವರ್ಗದ ಸದಸ್ಯತ್ವಕ್ಕಾಗಿ ಕೊಡತಕ್ಕ ಸದಸ್ಯತ್ವಶುಲ್ಕ ಮತ್ತು ಪ್ರವೇಶ ಶುಲ್ಕಗಳೊಡನೆ ಪರಿಷತ್ತಿಗೆ ಸಲ್ಲಿಸತಕ್ಕದ್ದು. ಅಂತಹವರನ್ನು ಆಯಾವರ್ಗದ ಸದಸ್ಯರನ್ನಾಗಿ ಸೇರಿಸಿಕೊಳ್ಳಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರತಕ್ಕದ್ದು. ಸಕಾರಣವಾಗಿ ಅಪೇಕ್ಷಾಪತ್ರವನ್ನು ತಿರಸ್ಕರಿಸಿದರೆ ಸದಸ್ಯತ್ವದ ಶುಲ್ಕವನ್ನು ಹಿಂದಿರುಗಿಸತಕ್ಕದ್ದು.

ಆ) ಎಲ್ಲ ವರ್ಗಗಳ ಸದಸ್ಯರು ತಮ್ಮ ಸದಸ್ಯತ್ವದ ಶುಲ್ಕವನ್ನು ಒಂದೇ ಕಂತಿನಲ್ಲಿ ಸಲ್ಲಿಸಬೇಕು.

ಇ) ಸದಸ್ಯರು ಆಜೀವ ಸದಸ್ಯತ್ವ ಗುರುತಿನ ಚೀಟಿಯನ್ನು ಹೊಂದಿರಬೇಕು. ಗುರುತಿನ ಚೀಟಿ ಇಲ್ಲದ ಸದಸ್ಯರು ಜನತಾ ಪ್ರಾತಿನಿಧ್ಯ ಕಾಯ್ದೆಯಲ್ಲಿ ಸೂಚಿಸಿರುವ ಗುರುತಿನ ಚೀಟಿಯಲ್ಲಿ ಒಂದನ್ನು ತೋರಿಸಿ ಮತದಾನ ಹಾಗೂ ಸದಸ್ಯರ ಸಭೆಯಲ್ಲಿ ಭಾಗವಹಿಸುವುದು.

ಈ) ಸದಸ್ಯ ಅಥವಾ ಸದಸ್ಯ ಸಂಸ್ಥೆಯ ವರ್ತನೆಯು ಪರಿಷತ್ತಿನ ಘನತೆ ಗೌರವಗಳಿಗೆ ಹಾಗೂ ಧ್ಯೇಯೋದ್ದೇಶಗಳಿಗೆ ವಿರೋಧವೆಂದು ಕಂಡು ಬಂದರೆ ಅಂತಹ ಸದಸ್ಯ ಅಥವಾ ಸದಸ್ಯ ಸಂಸ್ಥೆಯ ವಿವರಣೆಯನ್ನು ಪಡೆದು ಪರಿಶೀಲನೆ ಮಾಡಿ ಸದಸ್ಯತ್ವವನ್ನು ಮೂರು ವರ್ಷಗಳ ಕಾಲ ಅಮಾನತ್ತು ಮಾಡುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು, ಇಂತಹ ನಿರ್ಣಯವನ್ನು ಮುಂಬರುವ ವಾರ್ಷಿಕಾಧಿವೇಶನಕ್ಕೆ ತಿಳಿಸತಕ್ಕದ್ದು.

ಉ) ಒಮ್ಮೆ ಅಂಗೀಕೃತವಾದ ಸದಸ್ಯತ್ವದ ಹಣವನ್ನು ಯಾವುದೇ ಕಾರಣದಿಂದ ಹಿಂದಿರುಗಿಸತಕ್ಕದಲ್ಲ.

ಊ) ಸದಸ್ಯ, ಸದಸ್ಯ ಸಂಸ್ಥೆಯು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಲ್ಲಿ ಅದನ್ನು ಅಂಗೀಕರಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.

೯. ಸದಸ್ಯ ಮತ್ತು ಸಂಸ್ಥೆಯ ಹಕ್ಕು ಬಾಧ್ಯತೆಗಳು

ಅ) ಸದಸ್ಯತ್ವ ಅಂಗೀಕಾರವಾದ ದಿನದಿಂದ ಸದಸ್ಯತ್ವದ ಎಲ್ಲಾ ಹಕ್ಕುಗಳು ೩.೨ ನೆಯ ನಿಬಂಧನೆಗೆ ಒಳಪಟ್ಟು ಅವರಿಗೆ ಬರತಕ್ಕದ್ದು.

ಇ) ಪುಸ್ತಕಭಂಡಾರ, ವಾಚನಾಲಯ ಮೊದಲಾದ ಸೌಕರ್ಯಗಳ ನಿಯಮಾನುಸಾರ ಪಡೆಯಲು ಅಧಿಕಾರವಿರತಕ್ಕದ್ದು.

ಈ) ಸದಸ್ಯರು ಪರಿಷತ್ತಿನ ಪ್ರಕಟಣೆಗಳ ಪ್ರತಿ ಶೀರ್ಷಿಕೆಯ ಒಂದೊಂ ಪ್ರತಿಯನ್ನು ಮುಕ್ಕಾಲು ಬೆಲೆಗೆ ಪಡೆಯಲು ಹಕ್ಕುದಾರರಾಗಿರತಕ್ಕದ ಸರ್ಕಾರದ ಸಹಾಯಧನ ಪಡೆದು ಕಡಿಮೆ ಬೆಲೆ ನಿಗದಿಗೊಳಿಸಿ ಪ್ರಕಟಣೆಗಳು ಹಾಗೂ ಪರಿಷತ್ತು ನಡೆಸುವ ಪರೀಕ್ಷೆಗಳ ಪಠ್ಯಪುಸ್ತಕಗ ಹಾಗೂ ಪರಿಷತ್ಪತ್ರಿಕೆಗೆ ಮೇಲಿನ ನಿಯಮ ಅನ್ವಯಿಸುವುದಿಲ್ಲ.

ಉ) 'ಕನ್ನಡ ನುಡಿ' ಪತ್ರಿಕೆಯನ್ನು ಉಚಿತವಾಗಿ ಪಡೆಯತಕ್ಕದ್ದು. ಇನ್ನು ಹೊಸದಾಗಿ ತಿದ್ದುಪಡಿಯಾದ ದಿನಾಂಕದ ನಂತರ ಸದಸ್ಯರಾಗುವವ ಕನ್ನಡ ನುಡಿ ಚಂದದಾರ ರಾಗಲು ರೂ. ೫೦೦ ಗಳನ್ನು ಪಾವತಿಸುವು ಅಂತಹವರಿಗೆ ಮಾತ್ರ ಕನ್ನಡ ನುಡಿ ಕಳಿಸಲಾಗುವುದು.

ಊ) ವಾರ್ಷಿಕ ಸಭೆಗಳಲ್ಲೂ ಮತ್ತು ಕಾರ್ಯಕಾರಿ ಸಮಿತಿಯ ಸದಸ ಆಯ್ಕೆಯಲ್ಲಿಯೂ ಸಕಲ ಸದಸ್ಯರ ಸಾಮಾನ್ಯ ಅಥವಾ ವಿಶೇಷ ಸಭೆ ಕಾರ್ಯಕಲಾಪಗಳ ನಿರ್ಣಯಗಳ ಬಗ್ಗೆಯೂ ೩.೨ನೆಯ ನಿಬಂಧ ಒಳಪಟ್ಟು ಮತಕೊಡುವ ಅಧಿಕಾರವಿರತಕ್ಕದ್ದು.

೧೦. ಸಕಲ ಸದಸ್ಯರ ಸಭೆಗಳಲ್ಲಿ ಭಾಗವಹಿಸುವುದಕ್ಕಾಗಿಯೂ ಮತದಾನ ಮಾ ವುದಕ್ಕಾಗಿಯೂ ಪ್ರತಿಯೊಂದು ಸದಸ್ಯ ಸಂಸ್ಥೆಯು ಒಬ್ಬ ಕನ್ನಡ ಓದು ಬ ಬಲ್ಲ ಪ್ರತಿನಿಧಿಯನ್ನು ಕಳಿಸಬಹುದು. ಸದಸ್ಯ ಸಂಸ್ಥೆಯ ಅಧಿಕಾರಿಗ ಅಂಥ ಪ್ರತಿನಿಧಿಯ ಹೆಸರು ಸಭೆಯು ನಡೆಯುವ ೧೫ ದಿನಗಳ ಮುಂಚಿತವ ಪರಿಷತ್ತಿಗೆ ಲಿಖಿತ ರೂಪದಲ್ಲಿ ತಿಳಿಸಿರಬೇಕು. ಅಂಥ ಪ್ರತಿನಿಧಿಗೆ ಚುನಾವ ಗಳಲ್ಲಿ ಅಭ್ಯರ್ಥಿಯಾಗಿ ನಿಲ್ಲಲು ಅವಕಾಶವಿರುವುದಿಲ್ಲ. ಆದರೆ ಅಂಥ ಪ್ರ ನಿಧಿಯು ಪರಿಷತ್ತಿನ ಸದಸ್ಯನಾಗಿದ್ದರೆ ಆ ಕಾರಣದಿಂದ ಅಭ್ಯರ್ಥಿಯಾ ನಿಲ್ಲಬಹುದು. ಮತ ನೀಡುವ ಸಂದರ್ಭದಲ್ಲಿ ಪರಿಷತ್ತಿನ ಸ್ವತಃ ಸದ ನಾಗಿದ್ದರೆ ಅದರ ಒಂದು ಮತವನ್ನೂ ಹಾಗೆಯೇ ಸದಸ್ಯ ಸಂಸ್ಥೆಯ ಪರವ ಆಗಮಿಸಿದ್ದರೆ ಅದರ ಪರವಾಗಿ ಇನ್ನೊಂದು ಮತವನ್ನೂ ನೀಡುವ ಅಧಿಕಾರ ತಕ್ಕದ್ದು.

೧೧. ಕಾರ್ಯಕಾರಿ ಸಮಿತಿ

(೮)

ಅ)	ಅಧ್ಯಕ್ಷರು	೧
ಆ)	ಗೌರವ ಕಾರ್ಯದರ್ಶಿಗಳು	೨
ಇ)	ಗೌರವ ಕೋಶಾಧ್ಯಕ್ಷರು	೧
ಈ)	ಜಿಲ್ಲಾಘಟಕಗಳ ಚುನಾಯಿತ ಅಧ್ಯಕ್ಷರು	೩೦
ಉ)	ಗಡಿನಾಡ ಘಟಕಗಳ ಚುನಾಯಿತ ಅಧ್ಯಕ್ಷರು (ತಮಿಳುನಾಡು, ಆಂಧ್ರ, ಕೇರಳ, ಮಹಾರಾಷ್ಟ್ರ ಮತ್ತು ಗೋವಾ)	೫
ಊ)	ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು	೧
ಋ)	ನಿಕಟಪೂರ್ವ ಸಮ್ಮೇಳನಾಧ್ಯಕ್ಷರು	೧
ೠ)	ಕನ್ನಡ ಅಧ್ಯಯನ ವ್ಯವಸ್ಥೆಯುಳ್ಳ ವಿಶ್ವವಿದ್ಯಾನಿಲಯದ ಪ್ರತಿನಿಧಿ (ಕನ್ನಡ ಅಕ್ಷರಾನುಕ್ರಮಣಿಯಲ್ಲಿ)	೨
ಎ)	ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು	೧
ಏ)	ಮಹಿಳಾ ಸಾಹಿತಿ	೨
ಐ)	ಪರಿಶಿಷ್ಟ ಜಾತಿ ಪ್ರತಿನಿಧಿ	೨
ಒ)	ಪರಿಶಿಷ್ಟ ಪಂಗಡ ಪ್ರತಿನಿಧಿ	೧
ಓ)	ಸಂಘ ಸಂಸ್ಥೆಗಳ ಪ್ರತಿನಿಧಿ	೧
	ಒಟ್ಟು	೪೯

೧೨. ಅ) ಮೇಲಿನ ಆ, ಇ, ಗಳನ್ನು ಅಧ್ಯಕ್ಷರು ನಾಮಕರಣಮಾಡಿಕೊಳ್ಳತಕ್ಕದ್ದು. ಏ, ಐ, ಒ ಗಳನ್ನು ಕಾರ್ಯಕಾರಿ ಸಮಿತಿಯು ಆರಿಸಬೇಕು.

ಆ) ಮೊದಲನೆಯ ಕಾರ್ಯಕಾರಿ ಸಮಿತಿಯು ಅಸ್ತಿತ್ವಕ್ಕೆ ಬರಬೇಕಾದರೆ ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯ ಸಂಖ್ಯೆಯ ಮೂರನೇ ಒಂದು ಭಾಗದಷ್ಟಾದರೂ ಇರಬೇಕು.

ಇ) ನಿಬಂಧನೆ ೧೧, ೧೪ (ಆ) ಮತ್ತು ೧೫ (ಆ)ರಲ್ಲಿ ಸೂಚಿಸಿರುವ ಕಾರ್ಯಕಾರಿ ಸಮಿತಿ ಸದಸ್ಯರನ್ನು ಹೊರತುಪಡಿಸಿ ಇನ್ನಾವುದೇ ಸದಸ್ಯ / ಹುದ್ದೆಯನ್ನು ಸೃಷ್ಟಿಸಿಕೊಂಡಲ್ಲಿ ಅಂತಹ ಸದಸ್ಯ/ಹುದ್ದೆಯನ್ನು ಮಾನ್ಯ ಮಾಡತಕ್ಕದ್ದಲ್ಲ.

೧೩.ಅ) ಪರಿಷತ್ತಿನ ಅಧ್ಯಕ್ಷರು, ಜಿಲ್ಲಾ ಘಟಕದ ಅಧ್ಯಕ್ಷರು ನೇರ ಮತದಾನ ಮೂಲಕ ಆಯ್ಕೆಯಾಗತಕ್ಕದ್ದು. ಚುನಾವಣಾ ಉಪನಿಬಂಧನೆಗ ಗನುಗುಣವಾಗಿ ಕರ್ನಾಟಕ ರಾಜ್ಯದಲ್ಲಿರುವ ಪರಿಷತ್ತಿನ ಸದಸ್ಯರು ನೇ ಮತದಾನದ ಮೂಲಕ ಮತ ಚಲಾಯಿಸತಕ್ಕದ್ದು. ಗಡಿನಾಡ ಘಟ ಗಳಿರುವ ರಾಜ್ಯಗಳ ಸದಸ್ಯರೂ ಸೇರಿದಂತೆ ಕರ್ನಾಟಕದ ಹೊರಗ ಇರುವ ಸದಸ್ಯರು ಅಂಚೆ ಮೂಲಕ ಮತಚಲಾಯಿಸತಕ್ಕದ ಈ ಚುನಾವಣೆ ನಡೆದ ಎರಡು ತಿಂಗಳೊಳಗಾಗಿ ಜಿಲ್ಲೆಗಳಲ್ಲಿ ಜಿ ಘಟಕಗಳು ಗಡಿನಾಡ ಘಟಕಗಳು ರಚಿತವಾಗಿ ಪರಿಷತ್ತು ಸೂಚಿಸು ಕೆಲಸ ಕಾರ್ಯಗಳನ್ನು ನಡೆಸತಕ್ಕದ್ದು. ಜಿಲ್ಲಾ ಘಟಕದ ಅಧ್ಯಕ್ಷ ಮತ್ತು ಗಡಿನಾಡ ಘಟಕದ ಅಧ್ಯಕ್ಷರು ಅಧಿಕಾರ ಪ್ರಯುಕ್ತ ಪರಿಷತ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿರತಕ್ಕದ್ದು.

ಆ) ಪರಿಷತ್ತಿನ ಕಾರ್ಯಕಾರಿ ಸಮಿತಿಯ ಅವಧಿ ಐದು ವರ್ಷಗ ಇರತಕ್ಕದ್ದು.

೧೪. ಜಿಲ್ಲಾ ಘಟಕಗಳು

ಅ) ಕರ್ನಾಟಕ ಕಂದಾಯ ಜಿಲ್ಲೆಗಳಲ್ಲಿ ತಲಾ ಒಂದು ಜಿಲ್ಲಾ ಘ ವನ್ನು ರಚಿಸತಕ್ಕದ್ದು. ಕಂದಾಯ ಜಿಲ್ಲೆಗಳಿಗೆ ತಾಲ್ಲೂಕುಗಳಿರುವ ಬೆಂಗಳೂರು ನಗರ ಜಿಲ್ಲೆಗೆ ವಿಧಾನಸಭಾ ಕ್ಷೇತ್ರವನ್ನು ಒಂ ತಾಲ್ಲೂಕಾಗಿ ಪರಿಗಣಿಸತಕ್ಕದ್ದು, ವಿಧಾನಸಭಾ ಕ್ಷೇತ್ರದ ಪ್ರತಿನಿ ಗಳನ್ನು 'ಕ್ಷೇತ್ರ ಪ್ರತಿನಿಧಿ'ಗಳೆಂದು ಕರೆಯತಕ್ಕದ್ದು.

ಆ) ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿಯ ಸ್ವರೂಪ ಈ ಕೆಳಕಂಡ ಇರತಕ್ಕದ್ದು.

೧) ಅಧ್ಯಕ್ಷರು

೨) ಗೌರವ ಕಾರ್ಯದರ್ಶಿಗಳು

೩) ಗೌರವ ಕೋಶಾದ.ಕರು

೬)	ಪರಿಶಿಷ್ಟ ಜಾತಿ ಪ್ರತಿನಿಧಿ	೨
೭)	ಪರಿಶಿಷ್ಟ ಪಂಗಡ ಪ್ರತಿನಿಧಿ	೧
೮)	ಸಂಘ ಸಂಸ್ಥೆಗಳ ಪ್ರತಿನಿಧಿ	೧
೯)	ಜಿಲ್ಲಾ ವಾರ್ತಾಧಿಕಾರಿ	೧
೧೦)	ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು	೧
೧೧)	ಜಿಲ್ಲಾ ಘಟಕದ ನಿಕಟಪೂರ್ವ ಅಧ್ಯಕ್ಷರು	೧

(ಇ) ಪರಿಷತ್ತಿನ ಜಿಲ್ಲಾ ಘಟಕಗಳ ಚಟುವಟಿಕೆಗಳಿಗೆ ನೆರವಾಗುವ ಆ ಜಿಲ್ಲೆಯ ಗಣ್ಯರನ್ನು ಜಿಲ್ಲಾ ಘಟಕಗಳ ಕಾರ್ಯಕಾರಿ ಸಮಿತಿಗೆ 'ವಿಶೇಷ ಆಹ್ವಾನಿತ' ರನ್ನಾಗಿ ಕರೆಯಲು ಅವಕಾಶವಿರತಕ್ಕದ್ದು. ಗಡಿ ಜಿಲ್ಲಾ ಘಟಕಗಳಿಗೆ ಗಡಿ ಪ್ರದೇಶದ ಇಬ್ಬರು ಪ್ರತಿನಿಧಿಗಳನ್ನು ವಿಶೇಷ ಆಹ್ವಾನಿತರನ್ನಾಗಿ ಕರೆಯಬಹುದು.

ಈ) ಮೇಲಿನಂತೆ ಘಟಕಗಳನ್ನು ರಚಿಸಿ ಅದಕ್ಕೆ ಕೇಂದ್ರ ಅಧ್ಯಕ್ಷರ ಅನುಮತಿ ಪಡೆದು ಅನಂತರ ಪ್ರಕಟಿಸತಕ್ಕದ್ದು, ಯಾವುದೇ ಬದಲಾವಣೆಗೆ ಕೇಂದ್ರ ಅಧ್ಯಕ್ಷರ ಪೂರ್ವಭಾವಿ ಒಪ್ಪಿಗೆ ಪಡೆಯತಕ್ಕದ್ದು.

ಉ) ಯಾವುದೇ ಕಾರಣಕ್ಕೆ ಅವರ ಪರಿಷತ್ ಸದಸ್ಯತ್ವ ರದ್ದಾದರೆ ಜಿಲ್ಲಾ ಘಟಕದ ಸದಸ್ಯತ್ವವೂ ರದ್ದಾಗುತ್ತದೆ. ಜಿಲ್ಲಾ ಘಟಕಗಳಿಗೆ ನೇಮಕವಾಗುವ ಕಾಲದಲ್ಲಿ ಹಾಗೆ ನೇಮಕವಾಗುವವರು ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

ಊ) ಜಿಲ್ಲಾ ಸಮಿತಿಯ ಕಾರ್ಯಸ್ಥಳವು ಸಾಧ್ಯವಾದಷ್ಟೂ ಜಿಲ್ಲಾ ಕೇಂದ್ರವೇ ಆಗಿರತಕ್ಕದ್ದು.

ಋ) ಜಿಲ್ಲಾ ಘಟಕಗಳು - ಹಣಕಾಸು, ಆಸ್ತಿ, ಠೇವಣಿ, ಕಾರ್ಯಕ್ರಮಗಳು ಮೊದಲಾದ ವಿಷಯಗಳಲ್ಲಿ ಪರಿಷತ್ತಿನ ನೀತಿ ನಿರ್ದೇಶನಕ್ಕೆ ಒಳಪಟ್ಟಿರಬೇಕು.

ೠ) ಜಿಲ್ಲಾ ಘಟಕಗಳು ಅವುಗಳ ವ್ಯಾಪ್ತಿಯಲ್ಲಿ ನಡೆಸಲಾಗುವ ಕಾರ್ಯಕ್ರಮಗಳ ವರದಿಯನ್ನು ಪರಿಷತ್ತಿನ ಕೇಂದ್ರ ಕಛೇರಿಗೆ ಕ್ರಮವಾಗಿ

ಸಭೆ ಕರೆದು, ಆ ಸಮಿತಿಯಿಂದ ಲೆಕ್ಕಪತ್ರಗಳಿಗೆ ಒಪ್ಪಿಗೆ ಪಡೆದು ಆಡಿಟ್ ರಿಪೋರ್ಟ್ ಮತ್ತು ಓಚರುಗಳ ಸಹಿತವಾದ ವರ್ಷದ ಲೆಕ್ಕಗಳನ್ನು ಆಯಾ ವರ್ಷದ ಮೇ ತಿಂಗಳ ಕೊನೆಯೊಳಗಾಗಿ ಪರಿಷತ್ತಿಗೆ ಕಳುಹಿಸಬೇಕು.

೧೫. ತಾಲ್ಲೂಕು / ಕ್ಷೇತ್ರ ಘಟಕಗಳು

(ಅ) ಜಿಲ್ಲಾ ಘಟಕದ ಅಧ್ಯಕ್ಷರು ಪ್ರತಿ ತಾಲ್ಲೂಕುಗಳಲ್ಲಿ / ಕ್ಷೇತ್ರಗಳಲ್ಲಿ ಆಯಾ ತಾಲ್ಲೂಕಿನ ಸದಸ್ಯರೊಡನೆ ಸಮಾಲೋಚಿಸಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಘಟಕವನ್ನು ರಚಿಸತಕ್ಕದ್ದು. ಘಟಕದ ಕಾರ್ಯಕಾರಿ ಸಮಿತಿ ಈ ಕೆಳಕಂಡಂತಿರತಕ್ಕದ್ದು.

(ಆ)	ಅಧ್ಯಕ್ಷರು	೧
	ಗೌರವ ಕಾರ್ಯದರ್ಶಿಗಳು	೨
	ಗೌರವ ಕೋಶಾಧ್ಯಕ್ಷರು	೧
	ಪರಿಶಿಷ್ಟ ಜಾತಿ ಪ್ರತಿನಿಧಿ	೨
	ಪರಿಶಿಷ್ಟ ಪಂಗಡ ಪ್ರತಿನಿಧಿ	೧
	ಮಹಿಳಾ ಸಾಹಿತಿ	೨
	ಸಂಘ ಸಂಸ್ಥೆಗಳ ಪ್ರತಿನಿಧಿ	೧
	ತಾಲ್ಲೂಕು ಶಿಕ್ಷಣಾಧಿಕಾರಿಗಳು	೧
	ನಿಕಟಪೂರ್ವ ಅಧ್ಯಕ್ಷರು	೧
	ಇತರ ಸದಸ್ಯರು	೬

(ಇ) ಇತರ ಸದಸ್ಯರನ್ನು ನಾಮಕರಣ ಮಾಡಿಕೊಳ್ಳುವಾಗ ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರಕ್ಕೆ ಹಾಗೂ ಪ್ರಾದೇಶಿಕ ಗಡಿ ಪ್ರದೇಶಕ್ಕೆ ಪ್ರಾತಿನಿಧ್ಯ ಸಿಗುವಂತೆ ನೋಡಿಕೊಳ್ಳಬೇಕು.

(ಈ) ಕಾರ್ಯಕಾರಿ ಸಮಿತಿಯ ಸದಸ್ಯರು ಪರಿಷತ್ತಿನ ಸದಸ್ಯರಾಗಿರಬೇಕು.

(ಉ) ಲೆಕ್ಕಪತ್ರ, ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ

೧೬. ಗಡಿನಾಡ ಘಟಕಗಳು

ಅ) ಗಡಿನಾಡ ಘಟಕಗಳಲ್ಲಿ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ ಮತ್ತು ತೆಲಂಗಾಣ ಈ ರಾಜ್ಯಗಳಲ್ಲಿ ಕನಿಷ್ಠ ೧೦೦ (ಒಂದು ನೂರು) ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಅಲ್ಲಿ ಗಡಿನಾಡ ಘಟಕಗಳನ್ನು ರಚಿಸತಕ್ಕದ್ದು. ಇಂತಹ ಗಡಿನಾಡ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು. ಗಡಿನಾಡ ಘಟಕದ ಅಧ್ಯಕ್ಷರನ್ನು ಆಯಾ ಘಟಕದ ಸದಸ್ಯರು ಅಂಚೆ ಮೂಲಕ ಮತ ಚಲಾಯಿಸಿ ಆಯ್ಕೆ ಮಾಡತಕ್ಕದ್ದು. ಲೆಕ್ಕಪತ್ರ ಕಾರ್ಯಕ್ರಮಗಳು ಇತ್ಯಾದಿ ವಿಚಾರಗಳಿಗೆ ಜಿಲ್ಲಾ ಘಟಕದ ನಿಯಮಗಳೇ ಇದಕ್ಕೂ ಅನ್ವಯಿಸುತ್ತವೆ. ಉಳಿದಂತೆ ಗಡಿನಾಡ ಘಟಕಗಳ ಉಪ ನಿಬಂಧನೆಗಳನ್ನು ಅನುಸರಿಸತಕ್ಕದ್ದು.

ಆ) ಭಾರತದ ಇತರ ರಾಜ್ಯಗಳಲ್ಲಿ ೫೦೦ ಮಂದಿ ಪರಿಷತ್ ಆಜೀವ ಸದಸ್ಯರಿದ್ದರೆ ಆಯಾ ರಾಜ್ಯಗಳಲ್ಲಿ ಹೊರನಾಡ ವಿಶೇಷ ಘಟಕ ತೆರೆಯಬಹುದು. ಇಂತಹ ಘಟಕ ಒಂದು ರಾಜ್ಯಕ್ಕೆ ಒಂದೇ ಇರತಕ್ಕದ್ದು.

೧೭. ಜಿಲ್ಲಾ ಘಟಕ, ತಾಲ್ಲೂಕು ಘಟಕ ಹಾಗೂ ಗಡಿನಾಡ ಘಟಕ/ಕ್ಷೇತ್ರ ಘಟಕಗಳ ಕಾರ್ಯಕಾರಿ ಸಮಿತಿ ಸಭೆಗಳು ವರ್ಷದಲ್ಲಿ ಕನಿಷ್ಠ ಮೂರು ಸಲ ಸೇರಬೇಕು.

೧೮. **ಕಾರ್ಯಕಾರಿ ಸಮಿತಿ ಅಧ್ಯಕ್ಷರ ಮತ್ತು ಸದಸ್ಯರ ಆಯ್ಕೆ**

ಅ) ಪರಿಷತ್ತಿನ ಅಧ್ಯಕ್ಷರನ್ನು ಪರಿಷತ್ತಿನ ಮತದಾರರ ಪಟ್ಟಿಯಲ್ಲಿರುವ ಎಲ್ಲ ಸದಸ್ಯರೂ ಚುನಾಯಿಸತಕ್ಕದ್ದು. ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಲ್ಲುವವರು ಕನ್ನಡ ಬಲ್ಲವರಾಗಿದ್ದು, ಚುನಾವಣಾ ತಾರೀಖಿಗೆ ಹತ್ತು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು. ಅಧ್ಯಕ್ಷತೆಗೆ ನಿಲ್ಲುವವರು ಕನ್ನಡ ಭಾಷೆ ಸಾಹಿತ್ಯ, ಸಂಸ್ಕೃತಿಗಳಲ್ಲಿ ಸಾಕಷ್ಟು ಸೇವೆ ಮಾಡಿರುವವರಾಗಿರತಕ್ಕದ್ದು.

ಆ) ಪರಿಷತ್ತಿನ ಅಧ್ಯಕ್ಷರ ಅಧಿಕಾರಾವಧಿ ಐದು ವರ್ಷ ಮಾತ್ರ ಇರತಕ್ಕದ್ದು. ಒಂದು ಸಾರಿ ಅಧ್ಯಕ್ಷರಾಗಿ ಚುನಾಯಿತರಾದವರು ಮುಂದಿನ ಅವಧಿಯ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಆದರೆ ಮುಂದಿನ ಅವಧಿ ಕಳೆದ ನಂತರ ಮತ್ತೆ ಅವರು ಸರ್ಧಿಸುವದಕೆ ಅವಕಾಶವಿರತಕದು (ಒಂದು ಅವದಿಯಲಿ

ಇ) ಯಾವ ಕಾರಣದಿಂದಲಾದರೂ ಕಾರ್ಯಕಾರಿಸಮಿತಿ ಚುನಾವಣೆ ತಡವಾದ ಮುಂದೆ ಚುನಾವಣೆ ನಡೆಯುವವರೆಗೆ ಹಿಂದಿನ ಕಾರ್ಯಕಾರಿ ಸಮಿತಿಯೇ ಪರಿಷತ್ತಿನ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಈ ರೀತಿ ಮುಂದುವರಿದ ಅವಧಿ ಆರು ತಿಂಗಳುಗಳಿಗೆ ಮೀರತಕ್ಕದ್ದಲ್ಲ.

ಈ) ಯಾವ ಕಾರಣದಿಂದಲಾದರೂ ಅಧ್ಯಕ್ಷ ಸ್ಥಾನ ತೆರವಾದಾಗ ಇನ್ನುಳಿ ಅವಧಿಯವರೆಗೆ ಪರಿಷತ್ತಿನ ಕಾರ್ಯಕಾರಿ ಸಮಿತಿ, ಕಾರ್ಯಕಾ ಸಮಿತಿಯ ಚುನಾಯಿತ ಸದಸ್ಯರಲ್ಲಿ ಯಾರನ್ನಾದರೂ ಒಬ್ಬರನ ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು.

ಉ) ಅಧ್ಯಕ್ಷರು, ಕಾರ್ಯಕಾರಿ ಸಮಿತಿಯ ಗಮನಕ್ಕೆ ತರುವುದರ ಮೂಲ ತಾತ್ಕಾಲಿಕವಾಗಿ (ಆರು ತಿಂಗಳಿಗೆ ಕಡಿಮೆಯಿಲ್ಲದೆ ಒಂದು ವರ್ಷಕ್ಕೆ ಹೆಚ್ಚಾಗದ ಅವಧಿಯಲ್ಲಿ) ಕಾರ್ಯನಿರ್ವಹಿಸಲು ಸಾಧ್ಯವಾಗದಿದ್ದ ಆ ಕಾಲ ಪರ್ಯಂತ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಒಬ್ಬರಿ ಆ ಅಧಿಕಾರವನ್ನು ವಹಿಸಿಕೊಡಲು ಅಧ್ಯಕ್ಷರಿಗೆ ಅಧಿಕಾರವಿರುತ್ತದೆ.

ಊ) ಒಂದು ವರ್ಷಕ್ಕೆ ಮೀರಿ ಅಧ್ಯಕ್ಷರು ಗೈರು ಹಾಜರಾಗುವುದಾರೆ ಸ್ಥಾನ ತೆರವಾಗಿದೆ ಎಂದೇ ಪರಿಗಣಿಸತಕ್ಕದ್ದು.

೧೯. **ಕಾರ್ಯದರ್ಶಿಗಳ, ಕೋಶಾಧ್ಯಕ್ಷರ ಆಯ್ಕೆ**

ಅ) ಇಬ್ಬರು ಕಾರ್ಯದರ್ಶಿಗಳನ್ನೂ, ಒಬ್ಬರು ಕೋಶಾಧ್ಯಕ್ಷರನ್ನೂ ಆರಿ ಕೊಳ್ಳುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು. ಅವರು ಪರಿಷತ್ತಿ ಸದಸ್ಯರಾಗಿರತಕ್ಕದ್ದು.

ಆ) **ಕಾರ್ಯಕಾರಿ ಸಮಿತಿಯ ಸಭೆ**

ಕಾರ್ಯಕಾರಿ ಸಮಿತಿಯ ಸಭೆ ವರ್ಷಕ್ಕೆ ಕನಿಷ್ಠ ಪಕ್ಷ ನಾಲ್ಕು ಸಲ ಸೇ ತಕ್ಕದ್ದು.

ಇ) ಪರಿಷತ್ತಿನ ಅಧ್ಯಕ್ಷರೇ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆಯನ ವಹಿಸತಕ್ಕದ್ದು. ಅವರು ಹಾಜರಿಲ್ಲದಿರುವಾಗ ಕಾರ್ಯಕಾರಿ ಸಮಿತಿಯ [illegible]

ಈ) ಚುನಾವಣೆಯಾದ ಮೇಲೆ ಹೊಸ ಕಾರ್ಯಕಾರಿ ಸಮಿತಿಯು, ಫಲಿತಾಂಶ ಪ್ರಕಟಿಸಿದ ಒಂದು ತಿಂಗಳೊಳಗಾಗಿ ಬೆಂಗಳೂರಿನಲ್ಲಿ ಸೇರತಕ್ಕದ್ದು.

೨೦. ತಿಳಿವಳಿಕೆ

ಅ) ಕಾರ್ಯಕಾರಿ ಸಮಿತಿಯ ಸಾಮಾನ್ಯ ಸಭೆಗಳನ್ನು ಕುರಿತ ತಿಳಿವಳಿಕೆ ಪತ್ರಗಳನ್ನು ಹದಿನೈದು ದಿನಗಳಿಗೆ ಮುಂಚೆ ಸದಸ್ಯರಿಗೆ ಕಳುಹಿಸಿಕೊಡ ತಕ್ಕದ್ದು.

ಆ) ಜರೂರು ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿ ಸೇರುವ ಸಮಯವನ್ನು ಇಷ್ಟು ಮಟ್ಟಿಗೆ ಪೂರ್ವ ಭಾವಿಯಾಗಿ ಸದಸ್ಯರಿಗೆ ತಿಳಿಯಪಡಿಸಬೇಕೆಂಬ ಕಾಲ ವ್ಯವಧಾನದ ನಿರ್ಬಂಧವಿಲ್ಲ. ಜರೂರು ಸಂದರ್ಭವನ್ನು ನಿರ್ಧರಿಸುವ ಅಧಿಕಾರ ಅಧ್ಯಕ್ಷರಿಗೆ ಇರತಕ್ಕದ್ದು.

೨೧. ಅವಶ್ಯ ಸಂಖ್ಯೆ

ಅ) ಕಾರ್ಯಕಾರಿ ಸಮಿತಿ ಸಭೆಗೆ ಕಾರ್ಯ ನಿರ್ವಹಣಾಧಿಕಾರವಿರುವುದಕ್ಕೆ ಒಟ್ಟು ಮೂರನೇ ಒಂದು ಭಾಗದಷ್ಟು ಸದಸ್ಯರಾದರೂ ಬಂದಿರಬೇಕು.

ಆ) ಈ ಅವಶ್ಯಕ ಸಂಖ್ಯೆಯಷ್ಟು ಮಂದಿ ಸದಸ್ಯರು ಬರದೆ ಇದ್ದರೆ ಕಾರ್ಯಕಾರಿ ಸಮಿತಿಯ ಸಭೆಯನ್ನು ಒಂದು ಗಂಟೆಯ ಕಾಲ ಮುಂದೂಡಿ ಆಗ ಅವಶ್ಯ ಸಂಖ್ಯೆ ಇರಲಿ, ಇಲ್ಲದಿರಲಿ, ಹಿಂದಿನ ಸಭೆಗೆ ಗೊತ್ತಾಗಿದ್ದ ಕಾರ್ಯವಿವರಗಳನ್ನು ಪರ್ಯಾಲೋಚಿಸಲು ಕಾರ್ಯಕಾರಿ ಸಮಿತಿಗೆ ಅಧಿಕಾರವಿರತಕ್ಕದ್ದು. ಆದರೆ ಇತರ ವಿಷಯಗಳು ಪರಿಶೀಲನೆಗೆ ಬರುವ ಹಾಗಿಲ್ಲ.

೨೨. ಸದಸ್ಯ ಸ್ಥಾನದ ತೆರಪು

ಅ) ಕಾರ್ಯಕಾರಿ ಸಮಿತಿಯ ಚುನಾಯಿತ ಸದಸ್ಯರ ಸ್ಥಾನಗಳಲ್ಲಿ ಯಾವುದಾದರೂ ತೆರಪಾದರೆ ಆ ಸ್ಥಾನಕ್ಕೆ ಕಾರ್ಯಕಾರಿ ಸಮಿತಿ ಮತ್ತೊಬ್ಬ ಸದಸ್ಯರನ್ನು ಉಳಿದ ಕಾಲಾವಧಿಯವರೆಗೆ ನಾಮಕರಣ ಮಾಡಿಕೊಳ್ಳತಕ್ಕದ್ದು. ನಾಮಕರಣ ಸದಸ್ಯರು ಕನಿಷ್ಠ ೫ ವರ್ಷ ಹಿಂದಿನಿಂದಲೂ ಸತತವಾಗಿ ಸದಸ್ಯರಾಗಿರತಕ್ಕದ್ದು.

೨೩. ಉಪಸಮಿತಿಗಳು

ಪರಿಷತ್ತಿನ ವಿವಿಧ ಕಾರ್ಯಕಲಾಪಗಳನ್ನು ನಿರ್ವಹಿಸುವುದಕ್ಕೆ ಕಾರ್ಯಕಾ[illegible] ಸಮಿತಿ ಇತರ ಉಪಸಮಿತಿಗಳನ್ನು ನಿಯಮಿಸಿ ಕಾರ್ಯಭಾಗವನ್ನು ಆ ಉಪಸಮಿತಿಗಳಿಗೆ ವಹಿಸಬಹುದು. ಎಲ್ಲಾ ಉಪಸಮಿತಿಗಳ ನಡವಳಿಕೆಗಳನ್ನು ಸ್ಥಿರೀಕರಣಕ್ಕಾಗಿ ಕಾರ್ಯಕಾರಿ ಸಮಿತಿಯ ಮುಂದೆ ಇಡತಕ್ಕದ್ದು.

೨೪. ಸೇವಾ ಸಿಬ್ಬಂದಿ

ಪರಿಷತ್ತಿನ ಕೆಲಸಗಳನ್ನು ನಿರ್ವಹಿಸುವುದಕ್ಕಾಗಿ ಬೇಕಾಗುವ ನೌಕರರನ್ನು ನೇಮಿಸುವುದಕ್ಕೂ ದಂಡಿಸುವುದಕ್ಕೂ ತೆಗೆದು ಹಾಕುವುದಕ್ಕೂ ಅವ[illegible] ಸಂಬಳಗಳನ್ನೂ ಬಹುಮಾನಗಳನ್ನು ಗೊತ್ತುಮಾಡುವುದಕ್ಕೂ ಕಾರ್ಯಕಾ[illegible] ಸಮಿತಿಗೆ ಅಧಿಕಾರವಿರತಕ್ಕದ್ದು.

೨೫. ಪರಿಷತ್ತಿನ ಲೆಕ್ಕಪತ್ರಗಳ ಉಸ್ತುವಾರಿಯನ್ನು ನಿರ್ವಹಿಸಲು ಕರ್ನಾಟಕ ಸರ್ಕಾರದ ಲೆಕ್ಕಪತ್ರ ಇಲಾಖೆಯ ಒಬ್ಬರು ಲೆಕ್ಕಪತ್ರ ಅಧೀಕ್ಷಕರನ್ನು ಪ್ರ[illegible] ನಿಯೋಜನೆಯ ಮೇರೆಗೆ ನಿಯಮಿಸಿಕೊಳ್ಳತಕ್ಕದ್ದು.

೨೬. ಉಪ ನಿಬಂಧನೆಗಳು

ಅ) ಈ ನಿಬಂಧನೆಗಳಿಗೆ ವಿರೋಧವಿಲ್ಲದಂತೆ ಅವಶ್ಯಕವಿದ್ದಾಗ ಉ[illegible] ನಿಬಂಧನೆಗಳನ್ನು ಮಾಡಿಕೊಳ್ಳುವ ಅಥವಾ ಬದಲಾಯಿಸುವ ಅಧಿಕಾ[illegible] ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು. ಹೀಗೆ ಮಾರ್ಪಾಟಾದ ಉ[illegible] ನಿಬಂಧನೆಗಳ ವಿವರಗಳನ್ನು ಮುಂದಿನ 'ಕನ್ನಡ ನುಡಿ'ಯಲ್ಲಿ ಪ್ರಕಟಿಸತಕ್ಕದ್ದು. ಮತ್ತು ಮುಂದಿನ ಸಕಲ ಸದಸ್ಯರ ಅಧಿವೇಶನದ[illegible] ಸಭೆಯ ಗಮನಕ್ಕೆ ತರತಕ್ಕದ್ದು.

ಆ) ಈ ನಿಬಂಧನೆ ಅಥವಾ ಉಪನಿಬಂಧನೆಗಳಲ್ಲಿ ಯಾವುದಾದರೂ ತಿದ್ದುಪ[illegible] ಅಥವಾ ಬದಲಾವಣೆ ಆದರೆ ತತ್ಪೂರ್ವ ನಡೆದ ಕಾರ್ಯಕ್ರಮಗ[illegible] ಅಕ್ರಮಗಳೆನಿಸಲಾರವು.

೨೭. ಹಣಕಾಸು ಸಮಿತಿ

ಅ) ಪರಿಷತ್ತಿನ ಹಣಕಾಸು ನಿರ್ವಹಣೆ ಹಣಕಾಸು ಸಮಿತಿಗೆ ಸೇರಿದ[illegible] [illegible]

ಆ) ಹಣಕಾಸು ಸಮಿತಿಗೆ ಪರಿಷತ್ತಿನ ಅಧ್ಯಕ್ಷರೇ ಅಧ್ಯಕ್ಷರಾಗಿರತಕ್ಕದ್ದು. ಪರಿಷತ್ತಿನ ಉಳಿದ ಪದಾಧಿಕಾರಿಗಳು, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಕಾರ್ಯದರ್ಶಿ ಅಥವಾ ಅವರ ಪ್ರತಿನಿಧಿ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಅವರ ಪ್ರತಿನಿಧಿ, ಪರಿಷತ್ತಿನ ಕಾರ್ಯಕಾರಿ ಸಮಿತಿ ಆರಿಸಿದ ಕಾರ್ಯಕಾರಿ ಸಮಿತಿಯ ಇಬ್ಬರು ಸದಸ್ಯರು ಮತ್ತು ಕರ್ನಾಟಕ ಸರ್ಕಾರದ ಲೆಕ್ಕಪತ್ರ ಇಲಾಖೆಯಿಂದ ಪ್ರತಿನಿಯೋಜನೆ ಮೇಲೆ ನಿಯಮಿಸಿಕೊಂಡಿರುವ ಲೆಕ್ಕಪತ್ರ ಅಧೀಕ್ಷಕರು-ಇವರುಗಳು ಈ ಸಮಿತಿಯ ಸದಸ್ಯರಾಗಿರತಕ್ಕದ್ದು.

ಇ) ಪರಿಷತ್ತಿನ ಕೋಶಾಧ್ಯಕ್ಷರು ಈ ಸಮಿತಿಯ ಸಂಚಾಲಕರಾಗಿ ಕಾರ್ಯ ನಿರ್ವಹಿಸತಕ್ಕದ್ದು.

ಈ) ಹಣಕಾಸು ಸಮಿತಿ ವಾರ್ಷಿಕ ಪರಿಶೋಧಿತ ಲೆಕ್ಕಪತ್ರಗಳನ್ನು ಅನುಮೋದಿಸಿ ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡತಕ್ಕದ್ದು.

ಉ) ಕಟ್ಟಡಗಳು, ಪ್ರಕಟಣೆಗಳು, ಕಾರ್ಯಕ್ರಮಗಳು, ಹೊಸ ಹುದ್ದೆಗಳ ಸೃಷ್ಟಿ ಹಾಗೂ ಇನ್ನಿತರ ಹಣಕಾಸಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತೀರ್ಮಾನ ಕೈಗೊಂಡು ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡಬೇಕು.

ಊ) ಪರಿಷತ್ತಿನ ಪ್ರತಿ ತಿಂಗಳ ಆದಾಯ ವೆಚ್ಚವನ್ನು ಪರಿಶೀಲಿಸತಕ್ಕದ್ದು.

ಋ) ಹಣಕಾಸು ಸಮಿತಿಯ ಸಭೆಗೆ ಐದು ಮಂದಿ ಸದಸ್ಯರ ಹಾಜರಾತಿ ಅವಶ್ಯಕ.

೧೮. ಪ್ರಕಟಣಾ ಸಮಿತಿ

ಅ) ಪರಿಷತ್ತಿನ ಗ್ರಂಥ ಪ್ರಕಟಣಾಕಾರ್ಯ, ಪ್ರಕಟಣಾ ಸಮಿತಿಗೆ ಸೇರಿದ್ದು. ಪ್ರಕಟಣಾ ಸಮಿತಿಯ ರಚನೆ ಮತ್ತು ಕಾರ್ಯವ್ಯಾಪ್ತಿ ಈ ಸಂಬಂಧವಾದ ಉಪ ನಿಬಂಧನೆಗಳಿಗೆ ಅನುಗುಣವಾಗಿ ಇರತಕ್ಕದ್ದು.

ಆ) ಗ್ರಂಥ ಪ್ರಕಟಣಾ ಸಮಿತಿಗೆ ಪರಿಷತ್ತಿನ ಅಧ್ಯಕ್ಷರೇ ಅಧ್ಯಕ್ಷರಾಗಿರತಕ್ಕದ್ದು. ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಅಥವಾ ಅವರ ಪತ್ರಿನಿಧಿ. ಪರಿಷತಿನ ಇತರ ಪದಾಧಿ

ಇ) ಅಧ್ಯಕ್ಷರು ಸೂಚಿಸುವ ಕಾರ್ಯದರ್ಶಿಗಳಲ್ಲಿ ಒಬ್ಬರು ಈ ಸಮಿತಿಯ ಸಂಚಾಲಕರಾಗಿ ಕಾರ್ಯನಿರ್ವಹಿಸತಕ್ಕದ್ದು.

ಈ) ಪ್ರಕಟಣಾ ಸಮಿತಿ ಸಭೆಗೆ ಐದು ಮಂದಿ ಹಾಜರಾತಿ ಅವಶ್ಯಕ.

ಉ) ಪ್ರಕಟಣಾ ಸಮಿತಿ ಪರಿಷತ್ತಿನಿಂದ ಪ್ರಕಟಿಸಬಹುದಾದ ಪುಸ್ತಕಗಳನ್ನು ಆರಿಸಿ ಕಾರ್ಯಕಾರಿ ಸಮಿತಿಗೆ ಶಿಫಾರಸು ಮಾಡುವುದು.

ಊ) ಪ್ರಕಟಣೆಗೆ ಬಂದ ಹಸ್ತಪ್ರತಿಗಳನ್ನು ತಜ್ಞರ ಪರಿಶೀಲನೆಗೆ ಒಪ್ಪಿಸಿ ಅವರ ಅಭಿಪ್ರಾಯವನ್ನು ತರಿಸಿಕೊಂಡು ಪರಿಶೀಲಿಸುವುದು.

೧೯. ವಾರ್ಷಿಕ ಸಭೆ, ಕಾಲ, ಸ್ಥಾನ.

ಅ) ವಾರ್ಷಿಕ ಸಭೆ ಸೆಪ್ಟೆಂಬರ್ ತಿಂಗಳೊಳಗಾಗಿ ಸಾಮಾನ್ಯವಾ ಬೆಂಗಳೂರಿನಲ್ಲಿ ನಡೆಯತಕ್ಕದ್ದು. ಬೇರೆ ಊರುಗಳಲ್ಲಿಯೂ ವಾರ್ಷಿ ಸಭೆ ನಡೆಸಬಹುದು. ವಾರ್ಷಿಕ ಸಭೆ ಮತ್ತು ಇತರ ಸಭೆಗಳ ಪರಿಷದಧ್ಯಕ್ಷರೇ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಪರಿಷದಧ್ಯಕ್ಷ ಗೈರುಹಾಜರಿಯಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರಲ್ಲಿ ಒಬ್ಬರನ ಸಭಾಧ್ಯಕ್ಷತೆಗೆ ಚುನಾಯಿಸಿ ಕಾರ್ಯಕಲಾಪವನ್ನು ನಡೆಸತಕ್ಕದ್ದು.

ಆ) ತಿಳಿವಳಿಕೆ

ವಾರ್ಷಿಕ ಸಭೆಯ ತಿಳಿವಳಿಕೆ ಪತ್ರವನ್ನು ಅಂಥ ಸಭೆ ಸೇರುವುದ ನಾಲ್ಕು ವಾರ ಮುಂಚಿತವಾಗಿ ಸದಸ್ಯರಿಗೆ ಕಳಿಸತಕ್ಕದ್ದು.

ಇ) ಸದಸ್ಯರ ಸೂಚನೆಗೆ ಕಾಲ

ಪರಿಷತ್ತಿನ ಕಾರ್ಯಕಲಾಪಗಳ ಬಗ್ಗೆ ಸೂಚನೆಗಳನ್ನು ಸೂಚಿಸು ಸದಸ್ಯರು ವಾರ್ಷಿಕ ಸಭೆಗೆ ಗೊತ್ತಾಗಿರುವ ದಿವಸಕ್ಕೆ ಕನಿಷ್ಠ ಪ ಎರಡು ವಾರಗಳಿಗೆ ಕಡಿಮೆಯಿಲ್ಲದಷ್ಟು ಮುಂಚಿತವಾಗಿ ಪರಿಷತ್ತಿನ ಕಚೇರಿಗೆ ಮುಟ್ಟುವಂತೆ ಕಳಿಸತಕ್ಕದ್ದು.

೨೦. ಕಾರ್ಯಸೂಚಿ

ವಾರ್ಷಿಕ, ಸಕಲ ಸದಸ್ಯರ ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳು

ಆ) ಮುಂದಿನ ಒಂದು ವರ್ಷದ ಆಯವ್ಯಯ ಅಂದಾಜು ಪಟ್ಟಿಯ ಅಂಗೀಕಾರ.

ಇ) ಮುಂದಿನ ವರ್ಷಕ್ಕೆ ಲೆಕ್ಕಪರಿಶೋಧಕರ ನೇಮಕ.

ಈ) ಕಾರ್ಯಕಾರಿ ಸಮಿತಿಯ ಸೂಚನೆಗಳು.

ಉ) ಸದಸ್ಯರು ನಿಯಮಾನುಸಾರ ಕಳಿಸುವ ಸೂಚನೆಗಳು.

೩೧. ಸಕಲ ಸದಸ್ಯರ ಸಭೆಯ ನಿರ್ದಿಷ್ಟ ಸಂಖ್ಯೆ

ಪ್ರತಿಯೊಂದು ಸಕಲ ಸದಸ್ಯರ ಸಭೆಯಲ್ಲಿಯೂ ೧೦೦ ಮಂದಿ ಕಡಿಮೆ ಇಲ್ಲದಂತೆ, ಸದಸ್ಯರು ಹಾಜರಿರಬೇಕು. ಯಾವ ಸಭೆಯಲ್ಲೇ ಆಗಲಿ ಕ್ಲುಪ್ತ ಕಾಲಾನಂತರ ಅರ್ಧ ಗಂಟೆಯೊಳಗಾಗಿ ಈ ಅವಶ್ಯಕ ಸಂಖ್ಯೆಯಷ್ಟು ಸದಸ್ಯರು ಸೇರದಿದ್ದರೆ ಆ ಸಭೆಯನ್ನು ಅರ್ಧ ಗಂಟೆಯ ಕಾಲ ಮುಂದೆಹಾಕಿ ಸಭೆಯನ್ನು ನಡೆಸತಕ್ಕದ್ದು. ಅಂತಹ ಮುಂದೂಡಿದ ಸಭೆಗೆ ಅವಶ್ಯ ಸಂಖ್ಯೆಯ ಅಗತ್ಯ ಇರುವುದಿಲ್ಲ. ಆದರೆ ಈ ಸಭೆಯಲ್ಲಿ ಹೊಸ ವಿಷಯ ಯಾವುದನ್ನೂ ಚರ್ಚೆಗೆ ತರತಕ್ಕದ್ದಲ್ಲ.

೩೨. ಸದಸ್ಯರ ಅಧಿಕಾರ

ಅ) ಸಕಲ ಸದಸ್ಯರ ವಾರ್ಷಿಕ ಸಭೆಯಲ್ಲಿ ಭಾಗವಹಿಸುವ ಅಧಿಕಾರವು ತಮ್ಮ ಸದಸ್ಯತ್ವದ ಚಂದಾಹಣವನ್ನು ಸಭೆ ನಡೆಯುವ ತೊಂಬತ್ತು ದಿನಗಳ ಮುಂಚೆ ಪೂರ್ತಿಯಾಗಿ ಸಲ್ಲಿಸಿದವರಿಗೆ ಮಾತ್ರ ಇರತಕ್ಕದ್ದು.

ಆ) ಎಲ್ಲಾ ತೀರ್ಮಾನಗಳೂ ಸಭೆಯಲ್ಲಿರುವ ಸದಸ್ಯರ ಬಹುಮತದಿಂದ ಆಗತಕ್ಕದ್ದು. ಆದರೆ ಅಂಗರಚನೆಯ ತಿದ್ದುಪಡಿಗಳನ್ನು ಮಾಡುವ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದವರಲ್ಲಿ ನಾಲ್ಕರಲ್ಲಿ ಮೂರು ಭಾಗಕ್ಕೆ ಕಡಿಮೆ ಇಲ್ಲದಷ್ಟು ಬಹುಮತವಿರಬೇಕು.

೩೩. ವಿಶೇಷ ಸಭೆ

ಅ) ಕಾರ್ಯಕಾರಿ ಸಮಿತಿಗೆ ಅವಶ್ಯಕವೆಂದು ಕಂಡು ಬಂದಾಗ ಅಥವಾ

ಆ) ವಿಶೇಷ ಸಭೆಯಲ್ಲಿ ಮಂಡಿಸಬಯಸುವ ವಿಷಯ ಲಿಖಿತ ನಿರ್ಣಯ ರೂಪದಲ್ಲಿರಬೇಕು. ಆ ನಿರ್ಣಯದ ಸೂಚಕರಿರಲಿ ಹಾಗೂ ಅನುಮೋದಕರಿರಲಿ ತಮ್ಮ ಹೆಸರು ಮತ್ತು ಸ್ಪಷ್ಟ ವಿಳಾಸದೊಡನ ಸಹಿ ಮಾಡಿಕೊಡತಕ್ಕದ್ದು. ಅಂತಹ ನಿರ್ಣಯ ಪರಿಷತ್ತಿನ ಮೂಲ ಉದ್ದೇಶಗಳಿಗೆ ವಿರೋಧವಾಗಿರತಕ್ಕದ್ದಲ್ಲ.

ಇ) ವಿಶೇಷ ಸಭೆಯ ತಿಳಿವಳಿಕೆ ಪತ್ರವನ್ನು ೧೫ (ಹದಿನೈದು) ದಿನಗಳ ಮುಂಚೆ ಸದಸ್ಯರಿಗೆ ಕಳುಹಿಸತಕ್ಕದ್ದು.

೩೪. ಸಾಹಿತ್ಯ ಸಮ್ಮೇಳನ

ಅ) ಸಾಮಾನ್ಯವಾಗಿ ಪ್ರತಿವರ್ಷ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯತಕ್ಕದ್ದು.

ಆ) ಯಾವುದೇ ಒಂದು ಸ್ಥಳದಲ್ಲಿ ಸಮ್ಮೇಳನ ನಡೆಯಬೇಕಾದಾಗ ಪರಿಷತ್ತು ತನ್ನ ಜಿಲ್ಲಾ ಘಟಕಗಳ/ಗಡಿನಾಡ ಘಟಕಗಳ ಮೂಲಕ ಸಮ್ಮೇಳನ ನಡೆಸತಕ್ಕದ್ದು, ಅಂತಹ ಘಟಕಗಳಿಲ್ಲದೆಡೆಯಲ್ಲಿ ಪರಿಷತ್ತು ನೇರವಾಗಿ ಸಮ್ಮೇಳನವನ್ನು ನಡೆಸುವ ಏರ್ಪಾಟು ಮಾಡತಕ್ಕದ್ದು.

ಇ) ಸಮ್ಮೇಳನ ನಡೆಯುವ ಸ್ಥಳದಲ್ಲಿ ಸ್ವಾಗತ ಸಮಿತಿ ರಚನೆ ಆಗತಕ್ಕದ್ದು. ಆ ಜಿಲ್ಲೆಯ / ಗಡಿನಾಡ ಘಟಕವಿರುವ ರಾಜ್ಯದ ಸ್ಥಳೀಯ ಪ್ರಮುಖರೊಬ್ಬರು ಸ್ವಾಗತ ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು. ಪರಿಷತ್ತಿನ ಸಂಬಂಧ ಪಟ್ಟ ಘಟಕದ ಅಧ್ಯಕ್ಷರು ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಆ ಘಟಕದ ಉಳಿದ ಸದಸ್ಯರು ಸ್ವಾಗತ ಸಮಿತಿಯ ಸದಸ್ಯರಾಗಿರತಕ್ಕದ್ದು.

ಈ) ಪರಿಷತ್ತಿನ ಕಾರ್ಯಕಾರಿ ಸಮಿತಿಯು ಆಯಾ ವರ್ಷದ ಸಮ್ಮೇಳನಾಧ್ಯಕ್ಷರನ್ನು ಆರಿಸುವ ಅಧಿಕಾರ ಪಡೆದಿರತಕ್ಕದ್ದು. ಅಂತಹವರು ಪರಿಷತ್ತಿನ ಸದಸ್ಯರಾಗಿರಬೇಕು.

ಉ) ಕಾರ್ಯಕಾರಿ ಸಮಿತಿಯ ವಿಶೇಷಾಧಿಕಾರ

ಮಾಡಿ ಸಮ್ಮೇಳನವನ್ನು ನೆರವೇರಿಸುವುದಕ್ಕೂ ಅಥವಾ ಮುಂದೆ ಹಾಕುವುದಕ್ಕೂ ಕಾರ್ಯಕಾರಿ ಸಮಿತಿಗೆ ಅಧಿಕಾರವಿರುತ್ತದೆ.

೩೫. ವಿಷಯ ನಿರ್ಧಾರಕ ಮಂಡಲಿ

ಸಮ್ಮೇಳನದಲ್ಲಿ ಮಂಡಿಸುವ ನಿರ್ಣಯಗಳ ಬಗ್ಗೆ ನಿರ್ಧಾರ ಮಾಡುವುದಕ್ಕಾಗಿ ಪರಿಷತ್ತಿನ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ವಿಷಯ ನಿರ್ಧಾರಕ ಮಂಡಲಿಯನ್ನು ನೇಮಿಸತಕ್ಕದ್ದು. ಆ ಮಂಡಲಿಯಲ್ಲಿ ಈ ಕೆಳಕಂಡವರು ಇರತಕ್ಕದ್ದು.

ಅ) ಸಮ್ಮೇಳನಕ್ಕೆ ಬಂದಿರುವ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಎಲ್ಲ ಸದಸ್ಯರು.

ಆ) ಸಮ್ಮೇಳನದ ಅಧ್ಯಕ್ಷರು.

ಇ) ಸಮ್ಮೇಳನಕ್ಕೆ ಬಂದಿರುವ ಹಿಂದಿನ ಸಮ್ಮೇಳನಗಳ ಅಧ್ಯಕ್ಷರು.

ಈ) ಸ್ವಾಗತ ಸಮಿತಿಯ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು.

ಉ) ಪರಿಷತ್ತಿನ ಅಧ್ಯಕ್ಷರು ನಿಯಮಿಸುವ ಸಮ್ಮೇಳನಕ್ಕೆ ಆಗಮಿಸಿರುವ ಪರಿಷತ್ತಿನ ಇಬ್ಬರು ಸದಸ್ಯರು.

ಊ) ಪರಿಷತ್ತಿನ ಅಧ್ಯಕ್ಷರು ನಿಯಮಿಸುವ, ಸಮ್ಮೇಳನದ ಇಬ್ಬರು ಪ್ರತಿನಿಧಿಗಳು.

೩೬. ಆದಾಯ ಭಾಗ

ಅ) ಸಮ್ಮೇಳನದ ಪ್ರತಿನಿಧಿ ಶುಲ್ಕ ಪರಿಷತ್ತಿಗೆ ಸಲ್ಲತಕ್ಕದ್ದು.

ಆ) ಸಮ್ಮೇಳನದ ಹಣಕಾಸಿನ ವ್ಯವಹಾರವನ್ನು ಒಂದು ಷೆಡ್ಯೂಲ್ ಬ್ಯಾಂಕಿನಲ್ಲಿ ಖಾತೆ ತೆರೆದು ಸ್ವಾಗತ ಸಮಿತಿಯ ಅಧ್ಯಕ್ಷರು ಹಾಗೂ ಸ್ವಾಗತ ಸಮಿತಿಯ ಕೋಶಾಧ್ಯಕ್ಷರು ಹಾಗೂ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು ಜಂಟಿಯಾಗಿ ವ್ಯವಹರಿಸತಕ್ಕದ್ದು. ಚೆಕ್ಕುಗಳಿಗೆ ಇವರಲ್ಲಿ ಯಾರಾದರೂ ಇಬ್ಬರು ಸಹಿಮಾಡಿ ಬ್ಯಾಂಕಿನೊಡನೆ ವ್ಯವಹರಿಸಬೇಕು. ಚೆಕ್ಕಿನಲ್ಲಿ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ

ಸಂದಾಯವಾದ ಹಣವನ್ನು ಪರಿಷತ್ತು ಆ ಜಿಲ್ಲೆಯಲ್ಲಿ ಶಾಶ್ವತವಾದ ಪರಿಷತ್ತಿನ ಸ್ಥಿರ ಆಸ್ತಿಗಾಗಿ ವೆಚ್ಚ ಮಾಡತಕ್ಕದ್ದು.

ಈ) ಪರಿಷತ್ತು ನೇರವಾಗಿ ನಡೆಸಿದ ಸಮ್ಮೇಳನದ ಲೆಕ್ಕಪತ್ರಗಳ ಆಡಿಟ್ ಮಾಡಿಸಿ ಉಳಿದ ಪೂರ್ಣ ಮೊಬಗಲನ್ನು ಪರಿಷತ್ತಿನ ಕಚೇರಿ ಸಲ್ಲಿಸತಕ್ಕದ್ದು.

೩೭. ಆಡಳಿತ ವರ್ಷ

ಅ) ಪರಿಷತ್ತಿನ ಆಡಳಿತ ವರ್ಷ ಏಪ್ರಿಲ್ ಒಂದರಿಂದ ಮಾರ್ಚ್ ಮೂವತ್ತೊಂದರವರೆಗೆ ಇರತಕ್ಕದ್ದು.

ಆ) ಪರಿಷತ್ತಿನ ಲೆಕ್ಕಗಳ ಬಗ್ಗೆ ವಿವರಣೆಯನ್ನು ಪರಿಷತ್ತಿನ ಸದಸ್ಯರೇ ಯಾರೇ ಆಗಲಿ ಅಧ್ಯಕ್ಷರ ಅಥವಾ ಕಾರ್ಯದರ್ಶಿಗಳಿಂದ ಲಿಖಿ ಮೂಲಕ ಪಡೆಯತಕ್ಕದ್ದು.

ಇ) ಪರಿಷತ್ತಿನ ಹಣಕಾಸು ವ್ಯವಹಾರಗಳನ್ನೊಳಗೊಂಡ ಲೆಕ್ಕಪತ್ರಗಳನ ಪ್ರತಿವರ್ಷ ಕರ್ನಾಟಕ ಸರ್ಕಾರದ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಆಡಿಟ್ ಮಾಡಿಸಿ ಅವರ ವರದಿಯೊಂದಿಗೆ ಅದನ್ನು ವಾರ್ಷಿಕ ಸಭೆಯ ಅಂಗೀಕಾರಕ್ಕಾಗಿ ಮಂಡಿಸಬೇಕು.

ಈ) ಲೆಕ್ಕಪತ್ರಗಳನ್ನು ವಾಣಿಜ್ಯ ರೂಪದಲ್ಲಿ ಇರಿಸತಕ್ಕದ್ದು.

೩೮. ವ್ಯವಹಾರ

ಅ) ಪರಿಷತ್ತಿನ ಆಸ್ತಿಯನ್ನು ಕೂಡಿಸುವ, ರೂಢಿಸುವ, ವಿಲೇವಾ ಮಾಡುವ ಅಧಿಕಾರ ಸಕಲ ಸದಸ್ಯರ ಸಭೆಗೆ ಇರತಕ್ಕದ್ದು.

ಆ) ಪರಿಷತ್ತಿನ ಆಸ್ತಿಯನ್ನು ಅಡವು ಇಡುವ, ವಿಲೇವಾರಿ ಮಾಡುವ ಹಾಗೂ ಪರಿಷತ್ತಿಗೆ ಆಸ್ತಿಯನ್ನು ಕೊಳ್ಳುವ, ಮಾರುವ ಇತ್ಯಾದಿ ಅಧಿಕಾರ ಸಕಲ ಸದಸ್ಯರ ಸಭೆಗೆ ಇರತಕ್ಕದ್ದು.

ಇ) ಪರಿಷತ್ತಿನ ಆಸ್ತಿಯನ್ನು ಬಾಡಿಗೆಗೆ ಕೊಡುವ ಮತ್ತು ಬಾಡಿ ಪಡೆಯುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.

12

(೪)

ಉ) ಬ್ಯಾಂಕು; ಸರಕಾರ, ಎಲ್. ಐ. ಸಿ. ಇತ್ಯಾದಿ ಸಂಸ್ಥೆಗಳಿಂದ ಪರಿಷತ್ತು ಪಡೆಯುವ ಸಾಲಪತ್ರಗಳಿಗೆ ಮತ್ತು ಪರಿಷತ್ತಿನ ಆಸ್ತಿಗಳ ಕ್ರಯ, ವಿಕ್ರಯ, ಭೋಗ್ಯ,ಅಡವು, ಬಾಡಿಗೆ ಈ ಸಂಬಂಧವಾದ ವ್ಯವಹಾರ ಪತ್ರಗಳಿಗೆ ಮತ್ತು ಪತ್ರಗಳನ್ನು ರಿಜಿಸ್ಟರ್ ಮಾಡಿಸುವುದಕ್ಕೆ ಪರಿಷತ್ತಿನ ಅಧ್ಯಕ್ಷರು ಅಥವಾ ಅಧ್ಯಕ್ಷರಿಂದ ಅಧಿಕಾರ ಪಡೆದ ಒಬ್ಬ ಕಾರ್ಯದರ್ಶಿ ಪರಿಷತ್ತಿನ ಪರವಾಗಿ ರುಜುವನ್ನು ಹಾಕಿ ಮುದ್ರೆಯನ್ನೊತ್ತಿ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಊ) ಅಧ್ಯಕ್ಷರ ಜೊತೆಗೆ ಕೋಶಾಧ್ಯಕ್ಷರು ರುಜು ಹಾಕಿ ಬ್ಯಾಂಕುಗಳೊಡನೆ ವ್ಯವಹರಿಸತಕ್ಕದ್ದು. ಅಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷರಿಂದ ಅಧಿಕಾರ ಪಡೆದ ಕಾರ್ಯದರ್ಶಿಗಳಲ್ಲಿ ಒಬ್ಬರು ಮತ್ತು ಕೋಶಾಧ್ಯಕ್ಷರು ಚೆಕ್ಕುಗಳಿಗೆ ರುಜುಹಾಕಿ ಬ್ಯಾಂಕುಗಳೊಡನೆ ವ್ಯವಹರಿಸತಕ್ಕದ್ದು. ಕೋಶಾಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷರಿಂದ ಅಧಿಕಾರ ಪಡೆದ ಕಾರ್ಯದರ್ಶಿ ಅಧ್ಯಕ್ಷರೊಂದಿಗೆ ಚೆಕ್ಕುಗಳಿಗೆ ರುಜುಹಾಕಿ ಬ್ಯಾಂಕು-ಗಳೊಡನೆ ವ್ಯವಹರಿಸತಕ್ಕದ್ದು.

ಋ) ಸಂಸ್ಥೆಯ ನಿಯಮಾವಳಿ ತಿದ್ದುಪಡಿ ಸಂದರ್ಭದಲ್ಲಿ ವರಮಾನ ತೆರಿಗೆ ನಿಯಮಗಳಿಗೆ ವಿರೋಧವಾಗಿದ್ದಲ್ಲಿ ಅಂತಹ ತಿದ್ದುಪಡಿಗಳು ಸಿಂಧು ವಾಗುವುದಿಲ್ಲ. ಅಲ್ಲದೇ ಪೂರ್ವಭಾವಿಯಾಗಿ ವರಮಾನ ತೆರಿಗೆ ಆಯುಕ್ತರ ಅನುಮತಿ ಪಡೆಯದೆ ಅಂತಹ ನಿಯಮಗಳನ್ನು ತಿದ್ದುಪಡಿ ಮಾಡುವಂತಿಲ್ಲ.

ೠ) ಸಂಸ್ಥೆಯ ವಿಘಟನೆಯ ಸಂದರ್ಭದಲ್ಲಿ ಇರುವ ಆಸ್ತಿಯನ್ನು ಯಾವುದೇ ಸಂದರ್ಭದಲ್ಲಿ ಧರ್ಮದರ್ಶಿ, ಕಾರ್ಯಕಾರಿ ಸಮಿತಿ ಸದಸ್ಯ, ಆಡಳಿತ ವರ್ಗದವರಿಗೆ ಹಂಚುವಂತಿಲ್ಲ. ಬದಲಿಗೆ ೧೯೬೧ ರ ವರಮಾನ ತೆರಿಗೆ ಅಧಿನಿಯಮ ೮೦ ಜಿ ಪ್ರಕಾರ ಅಂಗೀಕಾರ ಪಡೆದ ಸಂಸ್ಥೆಯ ಉದ್ದೇಶ ಗಳನ್ನು ಹೋಲುವ ಇತರ ಸಂಘಸಂಸ್ಥೆಗಳಿಗೆ ವರ್ಗಾಯಿಸತಕ್ಕದ್ದು.

ಎ) ಸಂಸ್ಥೆಯು ಜಾತಿ ಮತಗಳ ತಾರತಮ್ಯವಿಲ್ಲದೆ ಎಲ್ಲರಿಗೂ ತೆರೆದಿರ ಬೇಕು.

ಏ) ಸ್ಥಾಯಿನಿಧಿ : ಪರಿಷತ್ತು ಸ್ಥಾಯಿನಿಧಿಯೊಂದನ್ನು ಸ್ಥಾಪಿಸಬೇಕು.

ಆ ವರಮಾನವನ್ನು ಬಡ್ಡಿ ಲಾಭಾಂಶ ಮೊದಲಾದ ರೂಪದ ಸದಸ್ಯರಿಗೆ ನೀಡುವಂತಿಲ್ಲ.

ಐ) ಪರಿಷತ್ತಿನ ಸ್ಥಾಯಿನಿಧಿಯನ್ನು ರೂಢಿಸುವ ಸಂದರ್ಭದಲ್ಲಿ ವರಮ ತೆರಿಗೆ ನಿಯಮಗಳನ್ನು ಅನುಸರಿಸತಕ್ಕದ್ದು.

೩೯. **ಚುನಾವಣಾ ಉಪನಿಬಂಧನೆಗಳು.**

ಅ) ಅಸ್ತಿತ್ವದಲ್ಲಿರುವ ಕಾರ್ಯಕಾರಿ ಸಮಿತಿಯ ನಿರ್ದಿಷ್ಟ ಅವಧಿ ಮುಗಿಯುವುದಕ್ಕೆ ಮೂರು ತಿಂಗಳು ಮುಂಚಿತವಾಗಿ ಮುಂ ಕಾರ್ಯಕಾರಿ ಸಮಿತಿಯ ಚುನಾವಣೆಗೆ ಏರ್ಪಾಟುಗಳನ್ನು ನ ತಕ್ಕದ್ದು.

ಆ) ಚುನಾವಣೆಗೆ ಮೂರು ತಿಂಗಳ ಮೊದಲೇ ಅಸಿಸ್ಟೆಂಟ್ ಕಮಿಷನ ಹುದ್ದೆಗೆ ಕಡಿಮೆ ಅಲ್ಲದ ಅಧಿಕಾರಿಯನ್ನು ಚುನಾವಣಾಧಿಕಾರಿಯಾ ನೇಮಿಸುವಂತೆ ಸರ್ಕಾರವನ್ನು ವಿನಂತಿಸಿಕೊಳ್ಳತಕ್ಕದ್ದು. ಅವ ಕಾನೂನು ಬಲ್ಲವರಾಗಿರಬೇಕು. ಹಾಗೂ ಅವರು ನಡೆಸುವ ಪರಿಷ ಚುನಾವಣೆಯ ಯಾವ ಅಧಿಕಾರ ಸ್ಥಾನಗಳಿಗೂ ಅಭ್ಯರ್ಥಿಯಾಗಿ ನಿ ತಕ್ಕದ್ದಲ್ಲ. ಸದಸ್ಯರಾಗಿದ್ದರೆ ಮತದಾನ ಮಾಡಬಹುದು.

ಇ) ಚುನಾವಣಾಧಿಕಾರಿಯು ಈ ಕೆಳಗಿನ ನಿಯಮಕ್ಕನುಸರಿಸಿ ಚುನಾವ ಕಾರ್ಯಗಳನ್ನು ನಡೆಸಬೇಕು.

ಈ) ಚುನಾವಣಾ ದಿನಾಂಕ ನಿಗದಿಗೊಳಿಸಿ ಚುನಾವಣಾ ವೇಳಾಪಟ್ಟಿಯ ಪ್ರಕಟಿಸಬೇಕು. ಚುನಾವಣೆ ನಡೆಯುವ ೯೦ ದಿನಗಳ ಮೊದ ಮತದಾರರ ಪಟ್ಟಿಯನ್ನು ಜಿಲ್ಲಾ ವಿಭಾಗಗಳಾಗಿ ವಿಂಗಡಿಸಿ ಕೇಂ ಪರಿಷತ್ತಿನ ಕಛೇರಿಯಲ್ಲಿಯೂ, ಜಿಲ್ಲಾ / ಗಡಿನಾಡ ಘಟಕಗಳಲ್ಲಿಯ ಪ್ರಕಟಿಸತಕ್ಕದ್ದು.

ಉ) ಚುನಾವಣಾ ಮತಪಟ್ಟಿಯ ಬಗ್ಗೆ ಯಾರಧಾದರೂ ಆಕ್ಷೇಪಣೆ ಇದ್ದ ಅಂಥವುಗಳನ್ನು ಎರಡುವಾರ ಅವಕಾಶಕೊಟ್ಟು ಸ್ವೀಕರಿಸಿ ೪೫ ದಿನ ಮೊದಲು ಮತದಾರರ ಅಂತಿಮ ಪಟ್ಟಿಯನ್ನು ಪರಿಷತ್ತಿನಲ್ಲಿ ಪ್ರಕಟ ತಕ್ಕ

ಋ) ನಾಮಪತ್ರಗಳ ಸ್ವೀಕಾರದ ಕೊನೆಯ ದಿನದಿಂದ ಮೂರು ದಿವಸ ಗಳೊಳಗಾಗಿ ಅವುಗಳ ಪರಿಶೀಲನೆ ನಡೆಯಬೇಕು.

ಎ) ನಾಮಪತ್ರಗಳ ಪರಿಶೀಲನೆಯಾದ ನಂತರ ನಾಮಪತ್ರವನ್ನು ಹಿಂತೆಗೆದು ಕೊಳ್ಳುವುದಕ್ಕೆ ಮೂರು ದಿವಸಗಳ ಅವಧಿಯ ಅವಕಾಶವಿರಬೇಕು.

ಏ) ಪರಿಶೀಲಿಸಿ ಉಳಿದಿರುವ ಅಂತಿಮ ಸ್ಪರ್ಧಿಗಳ ಹೆಸರನ್ನು ಕನ್ನಡ ವರ್ಣ ಮಾಲೆಯ 'ಅ' ಕಾರಾನುಕ್ರಮವಾಗಿ ಪ್ರಕಟಿಸಬೇಕು.

ಐ) ಅಗತ್ಯವಾದಷ್ಟೇ 'ನಾಮಪತ್ರಗಳು' ಬಂದರೆ ಅವರು ಅವಿರೋಧವಾಗಿ ಆಯ್ಕೆಯಾದರೆಂದು ಘೋಷಿಸಬೇಕು.

ಒ) ಹೊರನಾಡ ಮತದಾರರಿಗೆ ಚುನಾವಣೆ ದಿನಕ್ಕಿಂತ ೧೫ ದಿವಸ ಮುಂಚಿತ ವಾಗಿ ಮತಪತ್ರಗಳನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ರವಾನಿಸಬೇಕು.

ಓ) ಹೊರನಾಡ ಮತದಾರರು ರಿಜಿಸ್ಟರ್ಡ್ ಅಂಚೆಯ ಮೂಲಕ ಕಳಿಸುವ ಮತಪತ್ರಗಳನ್ನು ಅಧ್ಯಕ್ಷರ ಚುನಾವಣಾ ಫಲಿತಾಂಶ ಪ್ರಕಟಿಸುವ ಒಂದು ದಿನಕ್ಕೆ ಮುಂಚಿತವಾಗಿ ಚುನಾವಣಾಧಿಕಾರಿಗಳಿಗೆ ತಲುಪುವಂತೆ ಕಳಿಸತಕ್ಕದ್ದು.

೪೦.ಅ) ಸದಸ್ಯರ ಪಟ್ಟಿಯನ್ನೂ ಉಮೇದುವಾರಿಕೆಯ ಅಪೇಕ್ಷಾ ಪತ್ರಗಳನ್ನೂ ನಿಗದಿತ ಬೆಲೆಗೆ ಮಾರತಕ್ಕದ್ದು.

ಆ) ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಹಾಲಿ ಹೋಬಳಿ ಮಟ್ಟದಲ್ಲಿರುವ ಮತಕೇಂದ್ರಗಳಲ್ಲಿಯೂ ಮತದಾನ ಕೇಂದ್ರವಿರತಕ್ಕದ್ದು. ಇನ್ನಿತರ ಸ್ಥಳಗಳಲ್ಲಿ ಕನಿಷ್ಠ ೫೦೦ ಮತದಾರರಿದ್ದಲ್ಲಿ ಹೊಸದಾಗಿ ಮತಕೇಂದ್ರವನ್ನು ಸ್ಥಾಪಿಸಬೇಕು. ಬೆಂಗಳೂರು ನಗರ ಜಿಲ್ಲೆಯಲ್ಲಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಮತಕೇಂದ್ರವನ್ನು ಸ್ಥಾಪಿಸತಕ್ಕದ್ದು.

ಇ) ಚುನಾವಣೆ ನಡೆದ ದಿನವೇ ಆಯಾ ಸ್ಥಳದಲ್ಲಿ ಮತಗಳ ಎಣಿಕೆ ನಡೆಯ ತಕ್ಕದ್ದು. ಜಿಲ್ಲಾ ಘಟಕಗಳ ಅಧ್ಯಕ್ಷರುಗಳ ಚುನಾವಣಾ ಫಲಿತಾಂಶ ವನ್ನು ಸ್ಥಳದಲ್ಲಿಯೇ ಪ್ರಕಟಿಸತಕ್ಕದ್ದು. ಪರಿಷತ್ತಿನ ಅಧ್ಯಕ್ಷರ [illegible]

ಪರಿಷತ್ತಿಗೆ ತಂದು ಚುನಾವಣಾಧಿಕಾರಿಗೆ ತಲುಪಿಸತಕ್ಕದ್ದು ಚುನಾವಣಾ ತಾರೀಖಿನಿಂದ ಮೂರನೇ ದಿವಸದಂದು ಎಲ್ಲ ಜಿಲ್ಲೆಗಳಿಂ ತಂದ, ಅಭ್ಯರ್ಥಿಗಳು ಪಡೆದ ಮತಗಳನ್ನೂ ಅಂಚೆಯ ಮೂಲಕ ಬಂ ಮತಗಳನ್ನೂ ಒಟ್ಟು ಎಣಿಕೆಮಾಡಿ ಅಧ್ಯಕ್ಷರ ಫಲಿತಾಂಶವ ಪ್ರಕಟಿಸತಕ್ಕದ್ದು.

ಈ) ಯಾವುದಾದರೂ ಕಾರಣಕ್ಕಾಗಿ ಯಾವುದೇ ಸ್ಥಳದಲ್ಲಿ ಚುನಾವ ನಡೆಯದೆ ಹೋದರೆ ಅಂತಹ ಸ್ಥಳಗಳ ಚುನಾವಣೆಯನ್ನು ಬಿಟ ಉಳಿದ ಸ್ಥಳಗಳ ಮತಗಳ ಎಣಿಕೆ ನಡೆಸಿ ಸ್ಪರ್ಧಿಗಳು ಪಡೆದ ಮ ಗಳನ್ನು ಪ್ರಕಟಿಸತಕ್ಕದ್ದು. ಆದರೆ ಪರಿಷತ್ತಿನ ಅಧ್ಯಕ್ಷರ ಆಯ್ಕೆ ಘೋಷಣೆಯನ್ನು ನಿಂತ ಸ್ಥಳದ ಚುನಾವಣೆ ನಡೆಯುವವರೆಗೆ ತ ಹಿಡಿಯತಕ್ಕದ್ದು.

ಉ) ಚುನಾವಣೆ ನಿಂತ ಸ್ಥಳದಲ್ಲಿ ಮತ್ತೆ ಹತ್ತು ದಿನದೊಳಗಾಗಿ ಚುನಾವ ನಡೆಯತಕ್ಕದ್ದು.

ಊ) ಚುನಾವಣೆ ನಿಂತ ಸ್ಥಳದಲ್ಲಿ ಮರು ಚುನಾವಣೆ ನಡೆದ ಮೂರು ದಿ ಗಳಲ್ಲಿ ಪರಿಷತ್ತಿನ ಅಧ್ಯಕ್ಷರ ಫಲಿತಾಂಶವನ್ನು ಘೋಷಿಸತಕ್ಕದ್ದು.

ಋ) ಪರಿಷತ್ತಿನ ಚುನಾಯಿತ ಸ್ಥಾನಕ್ಕೆ ಮತ ನೀಡುವವರು ಚುನಾವ ತಾರೀಖಿಗೆ ಮೂರು ವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದ ರಾಗಿರತಕ್ಕದ್ದು.

ೠ) ಪರಿಷತ್ತಿನ ಜಿಲ್ಲಾ ಘಟಕಗಳ ಗಡಿನಾಡ ಘಟಕಗಳ ಅಧ್ಯಕ್ಷ ಸ್ಥಾನ ಸ್ಪರ್ಧಿಸುವವರು ಐದುವರ್ಷ ಹಿಂದಿನಿಂದ ಸತತವಾಗಿ ಪರಿಷತ್ತಿನ ಸದಸ್ಯರಾಗಿರತಕ್ಕದ್ದು.

ಎ) ಪರಿಷತ್ತಿನ ಬಾಕಿ ಉಳಿಸಿಕೊಂಡಿರುವವರು ಹಾಗೂ ಕೋರ್ಟಿನಿಂ ಶಿಕ್ಷೆಗೆ ಒಳಗಾದವರು ಚುನಾವಣೆಗೆ ನಿಲ್ಲಲು ಅರ್ಹರಾಗಿರುವುದಿಲ್ಲ.

೪೧. ಅ) ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸುವವರು ೧೦೦೦ (ಒಂದು ಸಾವಿ ರೂಪಾಯಿ ಠೇವಣಿಯನ್ನೂ ಜಿಲ್ಲಾ, ಗಡಿನಾಡ ಘಟಕಗಳಿಗೆ ಸ್ಪರ್ಧಿ ವವರು ೫೦೦ (ಐದು ನೂರು) ರೂಪಾಯಿಗಳ ಠೇವಣಿಯನ